RNI .KAR/KAN/2009/31934 ಬೆಂಗಳೂರು ಸಂಪುಟ: 16 ಸಂಚಿಕೆ: 96 ಪುಟ: 06 ಮಂಗಳವಾರ 11-03-2025

Mail:mussanje2010@gmail.com www.mussanjenews.com

# ಮುಸ್ಸಂಜೆ

ಪ್ರಭಾವಶಾಲಿ ಕನ್ನಡ ಸಂಜೆ ದಿನ ಪತ್ರಿಕೆ

Managing Editor: N.Veerendra Babu (MBA, LLB)
Executive Editor: L P Babu
Honourary Editor: Venkatesh





ಕನ್ನಡದಲ್ಲಿ ಬೆಳೆದು ಬರದೇ ಇರುವವರ ಬಗ್ಗೆ ಮಾತನಾಡಲ್ಲ

ಚಾಂಪಿಯನ್ಸ್ ಟ್ರೋಫಿ 2025; ಪಾಕಿಸ್ತಾನಕ್ಕೆ ಭಾರೀ ನಷ್ಟ

ರವಿಚಂದ್ರನ್ ಹೃದಯ ದೋಚುವ ಕಳ್ಳ ಪುಟ 6

## ಸದನದಲ್ಲಿ ಪ್ರತಿಧ್ವನಿಸಿದ ಗ್ಯಾರಂಟಿ ಯೋಜನೆ ಅನುಷ್ಠಾನಕ್ಕೆ ಕಾಂಗ್ರೆಸ್ ಕಾರ್ಯಕರ್ತರಿಗೆ ಗೌರವಧನ ಹಂಚಿಕೆ ವಿಷಯ

# ಗದ್ದಲ-ಕೋಲಾಹಲ

**ಬೆಂಗಳೂರು:** ಗ್ಯಾರಂಟಿ ಯೋಜನೆಗಳ ಅನುಷ್ಠಾನ, ಸಮಿತಿಗಳಿಗೆ ಕಾಂಗ್ರೆಸ್ ಕಾರ್ಯಕರ್ತರನ್ನು ನೇಮಿಸಿ ಅವರಿಗೆ ಸರ್ಕಾರದಿಂದ ವೇತನ ನೀಡುತ್ತಿರುವ ವಿಚಾರ ವಿಧಾನಸಭೆಯಲ್ಲಿ ಮಂಗಳವಾರ ಪ್ರತಧ್ವನಿಸಿ ಗದ್ದಲ-ಕೋಲಾಹಲ ನಡೆದಿದ್ದಲ್ಲದೇ ಆಡಳಿತ ಹಾಗೂ ಪ್ರತಿಪಕ್ಷಗಳ ಸದಸ್ಯರುಗಳು ಸದನದ ಬಾವಿಗಿಳಿದು ಧರಣಿ ನಡೆಸಲು ಕಾರಣವಾಯಿತು.

ಮಂಗಳವಾರ ಸದನ ಆರಂಭಗೊಂಡಾಗ ಪ್ರಶ್ನೋತ್ತರ ಅವಧಿಯಲ್ಲಿ ಜೆಡಿಎಸ್ ಸದಸ್ಯ ಎಂ.ಪಿ.ಕೃಷ್ಣಪ್ಪ ಈ ವಿಷಯ ಪ್ರಸ್ತಾಪಿಸಿ ನಿಮ್ಮ ಪಕ್ಷದ ಕಾರ್ಯಕರ್ತರುಗಳಿಗೆ ಸರ್ಕಾರದಿಂದ ಎಷ್ಟು ಸಂಭಾವನೆ ನೀಡುತ್ತಿದ್ದೀರಿ ಎಂದು ಪ್ರಶ್ನಿಸಿದರು.

ಇದಕ್ಕೆ ಉತ್ತರಿಸಿದ ಕಂದಾಯ ಸಚಿವ ಕೃಷ್ಣಭೈರೇಗೌಡ ಅವರು, ಅನುಷ್ಠಾನ ಸಮಿತಿ ಅಧ್ಯಕ್ಷರಿಗೆ ಮಾಸಿಕ 40000 ರೂ., ಉಪಾಧ್ಯಕ್ಷರಿಗೆ ಮಾಸಿಕ 10000 ರೂ. ಹಾಗೂ ಸದಸ್ಯರಿಗೆ ಪ್ರತಿಸಭೆಗೆ 1100 ರೂ.ನಂತೆ ನೀಡಲಾಗುತ್ತಿದೆ ಎಂದರು.

ಈ ಉತ್ತರ ಪ್ರತಿಪಕ್ಷಗಳಾದ ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರನ್ನು ತೀವ್ರವಾಗಿ ಕೆರಳಿಸಿತು. ಈ ವೇಳೆ ಕೃಷ್ಣ ಭೈರೇಗೌಡ ಹಾಗೂ ಶಾಸಕ ಸುನೀಲ್‌ಕುಮಾರ್ ನಡುವೆ ದೊಡ್ಡ ಜಟಾಪಟಿಯೇ ನಡೆಯಿತು.

ಸಾರ್ವಜನಿಕರ ಹಣವನ್ನು ನಿಮ್ಮ ಬಿಟ್ಟಿ ಭಾಗ್ಯಗಳ ಯೋಜನೆಗೆ ಅನುಷ್ಠಾನಕ್ಕಾಗಿ ಬಳಸಿಕೊಳ್ಳುತ್ತಿರುವುದು ದ್ರೋಹ ಎಂದು ಪ್ರತಿಪಕ್ಷಗಳು ರಾಜ್ಯ ಸರ್ಕಾರದ ವಿರುದ್ಧ ಹರಿಹಾಯ್ದರು. ಈ ವೇಳೆ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಮಾತಿನ ಚಕಮಕಿ ಆರಂಭಗೊಂಡು ಗದ್ದಲ ಕೋಲಾಹಲ ಸೃಷ್ಟಿಯಾಯಿತು.

ಸರ್ಕಾರದ ಪರವಾಗಿ ಡಿಸಿಎಂ ಡಿ.ಕೆ.ಶಿವಕುಮಾರ್, ಪರಮೇಶ್ವರ್, ಸಮಾಜಾಯಿಷಿ ನೀಡಲು ಮುಂದಾದರಾದೂ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಸೇರಿದಂತೆ ಬಹುತೇಕ ಶಾಸಕರು ಆಡಳಿತ ಪಕ್ಷದ ವಿರುದ್ಧ ಮುಗಿಬಿದ್ದರು.

ಈ ವೇಳೆ ಸಭಾಧ್ಯಕ್ಷರು ಪ್ರತಿಯೊಬ್ಬರಿಗೂ ಚರ್ಚೆ ನಿಲ್ಲಿಸಿಕೂರುವಂತೆ ತಿಳಿಸಿದರಾದರೂ, ಯಾರೂ ಸುಮ್ಮನೇ ಇರದಿದ್ದಾಗ ಸದನವನ್ನು ಕೆಲ ಕಾಲ ಮುಂದೂಡಲಾಯಿತು.




ಆನಂತರ ಸಮಾವೇಶಗೊಂಡಾಗಲೂ ಕೂಡ ಅದೇ ವಿಷಯ ಚರ್ಚೆಗೆ ಬಂತು.

ಪ್ರತಿಪಕ್ಷ ನಾಯಕ ಆರ್.ಅಶೋಕ್ ಮಾತನಾಡಿ, ಗ್ಯರಂಟಿ ಯೋಜನೆಗಳ ಅನುಷ್ಠಾನಕ್ಕೆ , ತಮ್ಮ ಕಾರ್ಯಕರ್ತರಿಗೆ ತೆರಿಗೆ ಹಣ ನೀಡಿ ಖಜಾನೆಯನ್ನು ಲೂಟಿ ಮಾಡುತ್ತಿದ್ದೀರಿ, ಇಂತಹ ಯೋಜನೆಗಳಿಗೆ ನಿಮ್ಮ ಪಕ್ಷದ ಹಣ ಕೊಡಿ, ಸಾರ್ವಜನಿಕರ ಹಣ ನೀಡಲು ನಿಮಗೇನು ನೈತಿಕತೆಯಿದೆ. ಇಂತಹ ಮನೆಯಾಳು ಕೆಲಸವನ್ನು ಯಾವ ಸರ್ಕಾರವೂ ಮಾಡಿಲ್ಲ ಎಂದು ವಾಗ್ದಾಳಿ ನಡೆಸಿದರು.

ಇದನ್ನು ವಿರೋಧಿಸಿ ಡಿ.ಕೆ.ಶಿವಕುಮಾರ್ ಮಾತ ನಾಡಲು ಮುಂದಾದಾಗ ಆಡಳಿತ ಪಕ್ಷದ ಸದಸ್ಯರುಗಳು ಧನಿಗೂಡಿಸಿ ಈ ಪದವನ್ನು ಕಡತದಿಂದ ತೆಗೆದುಹಾಕಬೇಕು. ಈ ಸಂಬಂಧ ಅಶೋಕ್ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದರು.

ಗದ್ದಲದ ನಡುವೆಯೇ ಮಾತನಾಡಿದ ಡಿ.ಕೆ. ಶಿವಕುಮಾರ್ ನಮ್ಮ ಸರ್ಕಾರ ಇರುವವರೆಗೂ ಪುಟ 2



ಕಟ್ಟಡ ಮತ್ತಿತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ವಿಧಾನಸೌಧ ಮುಂಭಾಗ ಮಂಗಳವಾರ ಆಯೋಜಿಸಿದ್ದ ಕಾರ್ಮಿಕರ ಸಂಚಾರಿ ಆರೋಗ್ಯ ಘಟಕ ವಾಹನಗಳ ಲೋಕಾರ್ಪಣೆ ಕಾರ್ಯಕ್ರಮ ಸಂದರ್ಭದಲ್ಲಿ ಡಿಸಿಎಂ ಡಿ ಕೆ ಶಿವಕುಮಾರ್ ಅವರು ವಾಹನಗಳ ಪರಿಶೀಲನೆ ನಡೆಸಿದರು. ಕಾರ್ಮಿಕ ಸಚಿವ ಸಂತೋಷ್ ಲಾಡ್, ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಮ್ ಅಹ್ಮದ್ ಜತೆಗಿದ್ದರು.

## 135 ಸಂಚಾರಿ ಆಸ್ಪತ್ರೆಗಳನ್ನು ಕಾರ್ಮಿಕರಿಗೆ ಒಪ್ಪಿಸಿದ ಸಿಎಂ

**ಬೆಂಗಳೂರು:** ಬಸವಣ್ಣನವರ ಕಾಯಕ-ದಾಸೋಹ ಪರಿಕಲ್ಪನೆಯಲ್ಲಿ ನಾವು ಕಾರ್ಯಕ್ರಮ ರೂಪಿಸುತ್ತಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನುಡಿದರು.

ಕಾರ್ಮಿಕ ಇಲಾಖೆ ವತಿಯಿಂದ ಕಟ್ಟಡ ಕಾರ್ಮಿಕರಿಗಾಗಿ ಮಾತ್ರ ಸಜ್ಜುಗೊಳಿಸಿರುವ 135 "ಸಂಚಾರಿ ಆರೋಗ್ಯ ಘಟಕ" ಆ್ಯಂಬುಲೆನ್ಸ್ ವಾಹನಗಳನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದರು.

ಸಮಾಜದಲ್ಲಿ ದುಡಿಯುವ ವರ್ಗ ಒಂದು ಕಡೆ ಇದ್ದರೆ, ದುಡಿಸಿಕೊಳ್ಳುವ ವರ್ಗ ಮತ್ತೊಂದು ಕಡೆ ಇರುತ್ತದೆ. ಯಾರು ಉತ್ಪಾದನಾ ಚಟುವಟಿಕೆಯಲ್ಲಿ ಭಾಗವಹಿಸುತ್ತಾರೋ ಅವರೇ ದೇಶ ನಿರ್ಮಾತೃಗಳು ಎಂದರು.

ಇಡೀ ದೇಶ ಕಾರ್ಮಿಕರ ಶ್ರಮವನ್ನು ಅವಲಂಬಿಸಿದೆ. ಸಮಾಜದಲ್ಲಿ ಒಂದೇ ವರ್ಗದವರು ದುಡಿಯುತ್ತಿರಬಾರದು, ಎಲ್ಲಾ ವರ್ಗದವರೂ ದುಡಿಯಬೇಕು. ಆಗ ಮಾತ್ರ ಬುದ್ಧ, ಬಸವ, ಅಂಬೇಡ್ಕರ್ ಆಶಯದ ಸಮ ಸಮಾಜ ನಿರ್ಮಾಣ ಸಾಧ್ಯ. ಸಚಿವ ಸಂತೋಷ್ ಲಾಡ್ ಅವರ ಕಾಳಜಿ ಮತ್ತು ಕರ್ತವ್ಯಪ್ರಜ್ಞೆಯಿಂದಾಗಿ ಉಚಿತ ಸಂಚಾರಿ ಪುಟ 2



## ವಿಷಪೂರಿತ ಇಂಜೆಕ್ಷನ್; ಬಿಜೆಪಿ ನಾಯಕನ ಹತ್ಯೆ

**ಸಂಭಾಲ್(ಉತ್ತರ ಪ್ರದೇಶ):** ಬಿಜೆಪಿ ನಾಯಕರೊಬ್ಬರಿಗೆ ಮೂವರು ಅಪರಿಚಿತ ವ್ಯಕ್ತಿಗಳು ವಿಷಕಾರಿ ಚುಚ್ಚುಮದ್ದು ನೀಡಿ ಹತ್ಯೆ ಮಾಡಿರುವ ಘಟನೆ ಉತ್ತರ ಪ್ರದೇಶದ ಸಂಭಾಲ್‌ನಲ್ಲಿ ಸೋಮವಾರ ನಡೆದಿದೆ. ಈ ಬಗ್ಗೆ ಪ್ರಕರಣ ದಾಖಲಿಸಿ ಕೊಂಡಿರುವ ಪೊಲೀಸರು ತನಿಖೆ ಆರಂಭಿಸಿದ್ದಾರೆ. ಜುನವೈ ಪೊಲೀಸ್ ಠಾಣಾ ವ್ಯಾಪ್ತಿಯ ದಫ್ತಾರಾ ಗ್ರಾಮದ ಗುಲ್ಫಾಮ್ ಸಿಂಗ್ ಯಾದವ್ (60) ಮೃತರು. ಯಾದವ್ ಅವರು, ತಮ್ಮ ಜಮೀನಿನಲ್ಲಿ ಕುಳಿತಿದ್ದಾಗ ಮೂವರು ದುಷ್ಕರ್ಮಿಗಳು ಬೈಕ್‌ನಲ್ಲಿ ಬಂದು ವಿಷಪೂರಿತ ಇಂಜೆಕ್ಷನ್ ಚುಚ್ಚಿ ಅಲ್ಲಿಂದ ಪರಾರಿಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಪುಟ 2

## ಅನುದಾನ ಬಿಡುಗಡೆ; ಮೋದಿ, ಸಚಿವರಿಗೆ ಬೊಮ್ಮಾಯಿ ಧನ್ಯವಾದ

ಹಾವೇರಿ: ಉತ್ತರ ಕರ್ನಾಟಕ ಭಾಗದ ಪ್ರಸಿದ್ಧ ಯಾತ್ರಾ ಸ್ಥಳ ಸವದತ್ತಿ ಯಲ್ಲಮ್ಮನ ಗುಡ್ಡದ ಅಭಿವೃದ್ಧಿಗೆ ಕೇಂದ್ರ ಸರ್ಕಾರ 100 ಕೋಟಿ ರೂ. ಮಂಜೂರು ಮಾಡಿರುವುದಕ್ಕೆ ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಪ್ರವಾಸೋದ್ಯಮ ಸಚಿವ ಗಜೇಂದ್ರಸಿಂಗ್ ಶೇಖಾವತ್ ಅವರಿಗೆ ಧನ್ಯವಾದ ತಿಳಿಸಿದ್ದಾರೆ. ಈ ಕುರಿತು ಎಕ್ಸ್ ಮಾಡಿರುವ ಅವರು, ಕೇಂದ್ರದ ಪ್ರಸಾದ ಯೋಜನೆ ಅಡಿಯಲ್ಲಿ ಸವದತ್ತಿ ಎಲ್ಲಮ್ಮ ದೇವಸ್ಥಾನದ ಅಭಿವೃದ್ಧಿಗೆ ಪುಟ 2

## ಭಾರತಕ್ಕೆ ತುಳಸಿ ಗಬ್ಬಾರ್ಡ್

**ನ್ಯೂಯಾರ್ಕ್/ವಾಷಿಂಗ್ಟನ್:** ಇಂಡೋ ಪೆಸಿಫಿಕ್‌ಗೆ ಬಹುರಾಷ್ಟ್ರೀಯ ಪ್ರವಾಸ ಕೈಗೊಂಡಿರುವ ಅಮೆರಿಕದ ರಾಷ್ಟ್ರೀಯ ಗುಪ್ತಚರ ಇಲಾಖೆಯ ನಿರ್ದೇಶಕಿ ತುಳಸಿ ಗಬ್ಬಾರ್ಡ್ ಅವರು ತಾವು ಭಾರತಕ್ಕೂ ಭೇಟಿ ನೀಡುವುದಾಗಿ ತಿಳಿಸಿದ್ದಾರೆ.



ನಾನು ಇಂಡೋ ಪೆಸಿಫಿಕ್ ಪ್ರಾಂತ್ಯಕ್ಕೆ ಬಹುರಾಷ್ಟ್ರೀಯ ಪ್ರವಾಸ ಕೈಗೊಂಡಿದ್ದೇನೆ. ಪೆಸಿಫಿಕ್ ಮಗುವಾಗಿ ಬೆಳೆದಿರುವ ನಾನು ಈ ಪ್ರದೇಶವನ್ನು ಚೆನ್ನಾಗಿ ಬಲ್ಲೆ, ಜಪಾನ್, ಥಾಯ್ಲೆಂಡ್ ಮತ್ತು ಭಾರತಕ್ಕೆ ತೆರಳಲಿರುವ ನಾನು ವಾಷಿಂಗ್ಟನ್ ಡಿಸಿಗೆ ಹಿಂದಿರುಗುವ ಹಾದಿಯಲ್ಲಿ ಫ್ರಾನ್ಸ್‌ಗೆ ಸಂಕ್ಷಿಪ್ತ ಭೇಟಿ ನೀಡಲಿದ್ದೇನೆ ಎಂದು ಗಬ್ಬಾರ್ಡ್ ಅವರು ವಿಮಾನ ಏರುತ್ತಿರುವ ಚಿತ್ರದ ಸಹಿತ ಎಕ್ಸ್‌ನಲ್ಲಿ ಮಾಡಿರುವ ಪೋಸ್ಟ್‌ನಲ್ಲಿ ವಿವರಿಸಿದ್ದಾರೆ. ಪುಟ 2

## ಬೆಂಗಳೂರಿಗೆ ವಕ್ಕರಿಸಿದ ಘಜ್ನಿ, ಘೋರಿ!!

### ಅಂದು ದೇಶ ಒಡೆದ ಕಾಂಗ್ರೆಸ್, ಇಂದು ಕೆಂಪೇಗೌಡರ ಬೆಂಗಳೂರನ್ನು ಒಡೆಯುತ್ತಿದೆ!!

**ಬೆಂಗಳೂರು:** ಬಿಬಿಎಂಪಿಯನ್ನು ಏಳು ಭಾಗ ಮಾಡುವುದಕ್ಕೆ ಹೊರಟಿರುವ ರಾಜ್ಯ ಕಾಂಗ್ರೆಸ್ ಸರಕಾರದ ವಿರುದ್ಧ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಹರಿಹಾಯ್ದಿದ್ದಾರೆ.

ಸಂಪದ್ಭರಿತ ಬೆಂಗಳೂರು ನಗರವನ್ನು ಲೂಟಿ ಮಾಡಲು ಈಗೊಬ್ಬ ಘಜ್ನಿ, ಘೋರಿ ವಕ್ಕರಿಸಿದ್ದಾನೆ. ಅವನು ನಗರದ ಲೂಟಿಗೆ 7 ದಾರಿ ಹುಡುಕುತ್ತಿದ್ದಾನೆ!! ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಅವರು; ಬಿಬಿಎಂಪಿಯನ್ನು ಛಿದ್ರ ಮಾಡುವ ಸರಕಾರದ ನಡೆಯನ್ನು ಕಟುವಾದ ಶಬ್ದಗಳಲ್ಲಿ ಟೀಕಿಸಿದ್ದಾರೆ.

ಹೋಳು ಮಾಡವುದು, ಒಡೆದಾಳುವುದರಲ್ಲಿ ಕಾಂಗ್ರೆಸ್ಸಿಗೆ ಕಾಂಗ್ರೆಸ್ಸೇ ಸಾಟಿ!! 75 ವರ್ಷದಿಂದ ಇದನ್ನೇ ಮಾಡಿದೆ, ಮುಂದುವರಿಸಿದೆ. ಕಾಂಗ್ರೆಸ್ ನೀತಿಯೇ ಆುತುಜಜ ಚಿಟಿಜ ಖಣಟಜ (ಒಡೆದು ಅಳುವುದು). ಅಂದು ಅಖಂಡ ಭಾರತವನ್ನು ಹೋಳು ಮಾಡಿತು! ಇಂದು ಬೆಂಗಳೂರು



ಮಹಾನಗರವನ್ನು ಹೋಳು ಮಾಡುತ್ತಿದೆ ಎಂದು ಅವರು ಕಿಡಿಕಾರಿದ್ದಾರೆ.

ನಾಡಪ್ರಭು ಕೆಂಪೇಗೌಡರ ಪರಂಪರೆಯನ್ನು ಬೇರುಸಹಿತ ಹಾಳು ಮಾಡುವುದೇ ಕಾಂಗ್ರೆಸ್ ಸರಕಾರದ ದುರಿದ್ದೇಶವಾಗಿದೆ. ಇವರಿಗೆ ಗ್ರೇಟರ್ ಬೆಂಗಳೂರು ಎನ್ನುವುದು ಪುಟ 2

## ಕೆಂಪು ಮೆಣಸಿನಕಾಯಿಗೆ ಪಿಡಿಪಿ ದರ ನಿಗದಿಪಡಿಸಿ: ಮೋದಿಗೆ ಸಿಎಂ ಮನವಿ

**ಬೆಂಗಳೂರು:** ಕೆಂಪು ಮೆಣಸಿನಕಾಯಿಗೆ ತುರ್ತಾಗಿ ಬೆಲೆ ಕೊರತೆ ಪಾವತಿ ಯೋಜನೆ ದರ ನಿಗದಿ ಮಾಡುವಂತೆ




ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಅವರಿಗೆ ಪತ್ರ ಬರೆದಿದ್ದಾರೆ. ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕದಲ್ಲಿ ಹೆಚ್ಚಾಗಿ ಕೆಂಪು ಮೆಣಸಿನಕಾಯಿ ಬೆಳೆಗಾರರಿದ್ದಾರೆ. ಕೆಂಪು ಮೆಣಸಿನಕಾಯಿ ಬೆಳೆಗಾರರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಹೀಗಾಗಿ ಕೂಡಲೇ ಕೆಂಪು ಮೆಣಸಿನಕಾಯಿಗೆ ಪಿಡಿಪಿ ದರ ನಿಗದಿ ಮಾಡಿ. ಇದರಿಂದ ಕೆಂಪು ಮೆಣಸಿನಕಾಯಿ ಬೆಳೆಗಾರರಿಗೆ ಅನುಕೂಲವಾಗಲಿದೆ ಎಂದು ಪತ್ರದ ಮೂಲಕ ಪುಟ 2

## ರನ್ಯಾರಾವ್ ಪ್ರಕರಣ; ಸಿಐಡಿ ತನಿಖೆಗೆ

ಬೆಂಗಳೂರು: ನಟಿ ರನ್ಯಾರಾವ್ ಸ್ಮಗ್ಲಿಂಗ್ ಪ್ರಕರಣವನ್ನು ಕೊನೆಗೂ ರಾಜ್ಯ ಸರ್ಕಾರ ಸಿಐಡಿ ತನಿಖೆಗೆ ವಹಿಸಿದೆ. ಅಲ್ಲದೇ ಇದೇ ವೇಳೆ ಶಿಷ್ಟಾಚಾರ ಉಲ್ಲಂಘನೆಗೆ ಸಂಬಂಧಿಸಿದಂತೆ ಅವರ ತಂದೆ ಡಿಜಿಪಿ ರಾಮಚಂದ್ರ ರಾವ್ ಅವರ ವಿರುದ್ಧ ಇಲಾಖಾವಾರು ತನಿಖೆಗೂ ಕೂಡ ಆದೇಶಿಸಿದೆ.

ಸ್ಮಗಿಂಗ್ ಮಾಡುತ್ತಿದ್ದ ವೇಳೆ ಆಕೆಯನ್ನು ತಪಾಸಣೆ ಮಾಡದೇ ಕಳುಹಿಸುತ್ತಿದ್ದ ಸಂಬಂಧ ಹಾಗೂ ಆಕೆಯ ಕಳ್ಳ ವ್ಯವಹಾರದ ಸಂಬಂಧ ಸಿಐಡಿ ತನಿಖೆಗೆ ಆದೇಶಿಸಿರುವ ರಾಜ್ಯ ಸರ್ಕಾರ ಶಿಷ್ಟಾಚಾರ ದುರ್ಬಳಕೆ ಆಗಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಅವಳ ತಂದೆ ಪೊಲೀಸ್ ಗೃಹ ಮಂಡಳಿ ಅಧ್ಯಕ್ಷ ರಾಮಚಂದ್ರರಾವ್ ವಿರುದ್ಧ ಇಲಾಖಾವಾರು ತನಿಖೆಗೆ ಆದೇಶಿಸಿದ್ದು, ಇಲಾಖಾವಾರು ತನಿಖೆಯನ್ನು ರಾಜ್ಯದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ ಅವರಿಗೆ ವಹಿಸಲಾಗಿದೆ.

ಈ ತನಿಖಾ ವರದಿಯನ್ನು ಒಂದು ವಾರದೊಳಗೆ



ಸರ್ಕಾರಕ್ಕೆ ನೀಡುವಂತೆಯೂ ಕೂಡ ಗೌರವ್ ಗುಪ್ತಾ ಅವರಿಗೆ ಸೂಚನೆ ನೀಡಲಾಗಿದೆ.

ಚಿನ್ನ ಸ್ಮಗ್ಲಿಂಗ್ ಪ್ರಕರಣದಲ್ಲಿ ರಾಮಚಂದ್ರ ರಾವ್ ಕೂಡ ಶಾಮಿಲಾಗಿದ್ದಾರೆಯೇ? ದುಬೈನಿಂದ ಬೆಂಗಳೂರಿಗೆ ಚಿನ್ನ ಸಾಗಿಸುವಾಗ ಶಿಷ್ಟಾಚಾರ ದುರ್ಬಳಕೆ ಆಗಿರುವುದರಲ್ಲಿ ಅವರ ಕೈವಾಡ ಇದೆಯೇ ಎಂಬ ಬಗ್ಗೆ ಒಂದು ವಾರದ ಒಳಗೆ ತನಿಖೆ ನಡೆಸುವಂತೆ ಗೃಹ ಇಲಾಖೆ ಸೂಚಿಸಿದೆ.

ನಟಿ ರನ್ಯಾ ಚಿನ್ನ ಸಾಗಾಣೆ ಮಾಡುವಾಗ ಐಪಿಎಸ್ ಅಧಿಕಾರಿ ರಾಮಚಂದ್ರ ರಾವ್ ಹೆಸರು ಬಳಸಿದ್ದರು. ಹೀಗಾಗಿ ಶಿಷ್ಟಾಚಾರದ ಸೌಲಭ್ಯ ಪಡೆಯಲು ಕಾರಣವೇನು?

ಕೇಸ್‌ನಲ್ಲಿ ರಾಮಚಂದ್ರರಾವ್ ಪಾತ್ರ ಏನೇನಿದೆ ಎಂಬ ಬಗ್ಗೆ ತನಿಖೆ ನಡೆಸಲು ಅಧಿಕಾರಿ ನೇಮಿಸಲಾಗಿದೆ. ಇವರು ತಕ್ಷಣ ತನಿಖೆ ಪ್ರಾರಂಭಿಸಿ ಒಂದು ವಾರದಲ್ಲಿ ವರದಿ ಸಲ್ಲಿಸಬೇಕಿದೆ.

ಇದರೊಟ್ಟಿಗೆ ರನ್ಯಾರಾವ್ ಸ್ಮಗ್ಲಿಂಗ್ ಹಾಗೂ ಆಕೆಗೆ ಭದ್ರತೆ ನೀಡುತ್ತಿದ್ದ ಬಗ್ಗೆ ಸಿಐಡಿ ತನಿಖೆಯೂ ಕೂಡ ನಡೆಯಲಿದೆ.

ಈ ನಡುವೆ ಪ್ರಮುಖ ಕಿಂಗ್‌ಪಿನ್ ಎನ್ನಲಾದ ತರುಣ್ ಎಂಬಾತನನ್ನು ಬಂಧಿಸಿರುವ ಡಿಆರ್‌ಐ ಅಧಿಕಾರಿಗಳು ಆತನನ್ನು ತೀವ್ರ ವಿಚಾರಣೆಗೆ ಒಳಪಡಿಸಿದ್ದಾರೆ. ಇದರೊಂದಿಗೆ ಸಿಬಿಐ ತನಿಖೆಯೂ ಕೂಡ ನಡೆಯುತ್ತಿದೆ.

## ಬಿಜೆಪಿ ಬಣ ಬಡಿದಾಟ ದೆಹಲಿಗೆ ಯತ್ನಾಳ್

**ಬೆಂಗಳೂರು:** ರಾಜ್ಯ ಬಿಜೆಪಿಯಲ್ಲಿ ನಡೆದಿರುವ ಬಣ ಬಡಿದಾಟ ಇದೀಗ ದೆಹಲಿ ಮತ್ತೆ ಅಂಗಳ ತಲುಪಿದೆ. ಮತ್ತೊಂದು ಅವಧಿಗೆ ಬಿ.ವೈ. ವಿಜಯೇಂದ್ರ ಅವರು ಮತ್ತೊಂದು ಅವಧಿಗೆ ಪಕ್ಷದ ರಾಜ್ಯಾಧ್ಯಕ್ಷರನ್ನಾಗಿ ಆಯ್ಕೆ ಮಾಡುವ ವಿಚಾರಕ್ಕೆ ಸಂಬಂಧಿಸಿದಂತೆ ಶಾಸಕ ಬಸವನಗೌಡ ಯತ್ನಾಳ್ ಬಣ ಪ್ರಬಲ ವಿರೋಧ ವ್ಯಕ್ತಪಡಿಸುತ್ತಿದೆ. ಹೀಗಾಗಿ ಬಿಜೆಪಿಯಲ್ಲಿ ಉಂಟಾಗಿರುವ ಬಣ ಬಡಿದಾಟ ಶಮನಗೊಳಿಸಲು ವರಿಷ್ಠರು ಕಸರತ್ತು ನಡೆಸಿದ್ದಾರೆ.



ಶಾಸಕ ಯತ್ನಾಳ್ ಹಾಗೂ ಅರವಿಂದ್ ಲಿಂಬಾವಳಿ ದೆಹಲಿಗೆ ತೆರಳಿದ್ದು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಲಿದ್ದಾರೆ. ಇತ್ತೀಚೆಗೆ ಅಮಿತ್ ಪುಟ 2

# ಆರೋಗ್ಯಕರವಯಸ್ಸಾಗುವಿಕೆಬಗ್ಗೆಪ್ರತಿಯೊಬ್ಬರೂ ಜಾಗೃತರಾಗಿ: ಸಚಿವ ದಿನೇಶ್ ಗುಂಡೂರಾವ್




**ಬೆಂಗಳೂರು:** ಉತ್ತಮ ಆರೋಗಭ್ಯಾಸ ಹೊಂದುವುದರಿಂದ ಮಾತ್ರ ಪ್ರತಿಯೊಬ್ಬರು ಆರೋಗ್ಯವಂತ ದೀರ್ಘಾಯುಷಿಯಾಗಲು ಸಾಧ್ಯ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (ಐಐಎಸ್‌ಸಿ) ಆಯೋಜಿಸಿದ್ದ "ಲಾಂಗಿವಿಟಿ ಇಂಡಿಯಾ ಕಾನ್ಫರೆನ್ಸ್" (ದೀರ್ಘಾಯುಷ್ಯ ಭಾರತ ಸಮ್ಮೇಳನ)ವನ್ನು ಉದ್ಘಾಟಿಸಿ ಮಾತನಾಡಿದರು.

ಆರೋಗ್ಯವಂತರಾಗಿ ಹೆಚ್ಚು ಕಾಲ ಬದುಕುವುದು ಸವಾಲಿನ ವಿಷಯವಾಗಿದೆ. ನಮ್ಮ ಆಹಾರಭ್ಯಾಸಗಳು ನಮ್ಮನ್ನು ಅನಾರೋಗ್ಯದತ್ತ ಕೊಂಡೊಯ್ಯುತ್ತಿದೆ. ಎಷ್ಟು ವರ್ಷ ಬದುಕಿದ್ದೆವು ಎನ್ನುವುದಕ್ಕಿಂತ ಎಷ್ಟು ವರ್ಷ ಆರೋಗ್ಯವಾಗಿ ಬದುಕುತ್ತೇವೆ ಎನ್ನುವುದು ಮುಖ್ಯ. ಆರೋಗ್ಯವಂತ ದೀರ್ಘಾಯಸ್ಸು ಹೊಂದಲು ಪ್ರತಿಯೊಬ್ಬರು ಇಂದಿನಿಂದಲೇ ಉತ್ತಮ ಆರೋಗಭ್ಯಾಸ ಪ್ರಾರಂಭಿಸಬೇಕು, ಆಗಷ್ಟೇ ಹೆಚ್ಚು ಕಾಲ ಆರೋಗ್ಯವಾಗಿ ಬದುಕಲು ಸಾಧ್ಯ. ಈ ನಿಟ್ಟಿನಲ್ಲಿ ವಿಜ್ಞಾನ ಕ್ಷೇತ್ರದಲ್ಲಿ ಇನ್ನಷ್ಟು ಸಂಶೋಧನೆ ನಡೆಯಬೇಕು ಎಂದು ಹೇಳಿದರು.

ಎನ್‌ಯುಎಸ್‌ನ ಆರೋಗ್ಯಕರ ದೀರ್ಘಾಯುಷ್ಯ ಕೇಂದ್ರದ ನಿರ್ದೇಶಕ ಬ್ರಿಯಾನ್ ಕೆನಡಿ ಮಾತನಾಡಿ, ಈ ಸಮ್ಮೇಳನದ ಮೂಲಕ ಹೆಚ್ಚು ಜನಸಂಖ್ಯೆ ಇರುವ ಭಾರತದಲ್ಲಿ ಜನರು ಆರೋಗ್ಯಕರವಾಗಿ ವಯಸ್ಸಾಗುವ ಬಗ್ಗೆಯೂ ಆದ್ಯತೆ ನೀಡಲು ಅವಕಾಶ ಮಾಡಿಕೊಟ್ಟಿದೆ. ಪ್ರತಿಯೊಬ್ಬರಿಗೂ ವಯಸ್ಸಾಗಲಿದೆ ಆದರೆ ಅವರು ವಯಸ್ಸಾದ ಸಂದರ್ಭದಲ್ಲಿ ಎಷ್ಟು ಆರೋಗ್ಯವಾಗಿದ್ದಾರೆ ಎಂಬುದು ಮುಖ್ಯ. ಇದಕ್ಕಾಗಿ ವಿಜ್ಞಾನದ ಹೆಜ್ಜೆ ಹಾಗೂ ಜನರಲ್ಲಿನ ಜಾಗೃತಿ ಬಗ್ಗೆಯೂ ಈ ಸಮ್ಮೇಳನದಲ್ಲಿ ಚರ್ಚೆಯಾಗುತ್ತಿರುವುದು ಪ್ರಶಂಸನಾರ್ಹ ಎಂದು ಹೇಳಿದರು.

ಐಐಎಸ್‌ಸಿ ಇಂಟರ್ ಡಿಸಿಪ್ಲಿನರಿ ಸೈನ್ಸಸ್ ವಿಭಾಗದ ಡೀನ್ ನವಕಂತ ಭಟ್ ಮಾತನಾಡಿ, ಭಾರತದಲ್ಲಿ ಮುಂದಿನ ದಿನಗಳಲ್ಲಿ ವಯಸ್ಸಾಗುವವರ ಸರಾಸರಿ ಪ್ರಮಾಣ ಹೆಚ್ಚಾಗಲಿದೆ. ಆದರೆ, ಇಂದು ನಮ್ಮ ಜೀವನಶೈಲಿ, ಆಹಾರಕ್ರಮ ಗಮನಿಸಿದರೆ ಭವಿಷ್ಯದ ಬಗ್ಗೆ ಯೋಚನೆ ಮೂಡಲಿದೆ. ಆರೋಗ್ಯಕರ ಭವಿಷ್ಯ ನಿರ್ಮಾಣಕ್ಕೆ ಯಾವೆಲ್ಲಾ ಕ್ರಮದ ಅಗತ್ಯ ಎಂಬುದರ ಬಗ್ಗೆ ಸುದೀರ್ಘ ಚರ್ಚೆಯಾಗಬೇಕು, ಅನುವಂಶಿಕ ಕಾಯಿಲೆಗಳ ನಿರ್ವಹಣೆ, ಪರಿಸರದಿಂದ ಆಗುವ ಆರೋಗ್ಯ ಸಮಸ್ಯೆ ಸೇರಿದಂತೆ ವಯಸ್ಸಾದ ಬಳಿಕ ಕಾಣಿಸಿಕೊಳ್ಳುವ ಆರೋಗ್ಯ ಸಮಸ್ಯೆಗಳನ್ನು ಪರಿಹರಿಸಲು ಆಯಾ ಕ್ಷೇತ್ರದ ವೈದ್ಯ ಹಾಗೂ ವಿಜ್ಞಾನ ತಜ್ಞರೊಂದಿಗೆ ಚರ್ಚಿಸಿ ಪರಿಹಾರ ಕಂಡುಕೊಳ್ಳಬೇಕು. ಈಗಿಂದಲೇ ಈ ವಿಷಯಕ್ಕೆ ಗಮನ ನೀಡದೇ ಹೋದಲ್ಲಿ ಭವಿಷ್ಯದಲ್ಲಿ ಪ್ರತಿಯೊಬ್ಬರೂ ಅನಾರೋಗ್ಯದ ಜೀವನ ಸಾಗಿಸಬೇಕಾಗಬಹುದು ಎಂದು ಎಚ್ಚರಿಸಿದರು.

ಅಧಿವೇಶದಲ್ಲಿ ಆರೋಗ್ಯದ ವಯಸ್ಸಾಗುವಿಕೆಯ ಪ್ರಮಾಣವನ್ನು ಹೆಚ್ಚಿಸಲು ತೆಗೆದುಕೊಳ್ಳಬೇಕಾದ ಕ್ರಮಗಳು, ಸವಾಲುಗಳ ಬಗ್ಗೆ ತಜ್ಞರಿಂದ ಚರ್ಚೆ ನಡೆಯಿತು.

ಸಮಾವೇಶದಲ್ಲಿ ಎಂಎಲ್‌ಸಿ ಮಂಜುನಾಥ ಭಂಡಾರಿ, ಐಐಎಸ್‌ಸಿ ನಿರ್ದೇಶಕ ಗೋವಿಂದನ್ ರಂಗರಾಜನ್ ಉಪಸ್ಥಿತರಿದ್ದರು.


# ಅನುದಾನ ಬಿಡುಗಡೆಗೆ ಸಿಎಂಗೆ ಬಸವರಾಜ ಬೊಮ್ಮಾಯಿ ಪತ್ರ

**ಹಾವೇರಿ:** ಹಾವೇರಿ ಜಿಲ್ಲೆ ಸವಣೂರ ಪಟ್ಟಣದಲ್ಲಿ ಸರಕಾರಿ ಆಯುರ್ವೇದಿಕ್ ಮಹಾವಿದ್ಯಾಲಯ ಹಾಗೂ ಆಸ್ಪತ್ರೆ ಈಗಾಗಲೇ ಮಂಜೂರಾಗಿದ್ದು, ಈ ಕಟ್ಟಡದಲ್ಲಿ ತಾಲೂಕಾ ಸಾರ್ವಜನಿಕ ಆಸ್ಪತ್ರೆಯನ್ನು ಸ್ಥಳಾಂತರಿಸಬೇಕೆಂದು ಇಲಾಖೆ ತೀರ್ಮಾನಿಸುತ್ತಿರುವುದನ್ನು ಕೈಬಿಡಬೇಕು ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಆಗ್ರಹಿಸಿದ್ದಾರೆ.

ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರಿಗೆ ಪತ್ರ ಬರೆದಿರುವ ಅವರು, ಹಾವೇರಿ ಜಿಲ್ಲೆ ಸವಣೂರ ಪಟ್ಟಣದಲ್ಲಿ ಸರಕಾರಿ ಆಯುರ್ವೇದಿಕ್ ಮಹಾವಿದ್ಯಾಲಯ ಹಾಗೂ ಆಸ್ಪತ್ರೆ ಈಗಾಗಲೇ ಮಂಜೂರಾಗಿದ್ದು, ರೂ. 44.00 ಕೋಟಿಗಳ ವೆಚ್ಚದಲ್ಲಿ ಕಟ್ಟಡ ನಿರ್ಮಾಣ ಪ್ರಗತಿಯಲ್ಲಿದೆ. ಈ ಮಹಾವಿದ್ಯಾಲಯ ಹಾಗೂ ಆಸ್ಪತ್ರೆಯನ್ನು ರದ್ದುಪಡಿಸಿ, ಈ ಕಟ್ಟಡದಲ್ಲಿ ತಾಲೂಕಾ ಸಾರ್ವಜನಿಕ ಆಸ್ಪತ್ರೆಯನ್ನು ಸ್ಥಳಾಂತರಿಸಬೇಕೆಂದು ಇಲಾಖೆ ತೀರ್ಮಾನಿಸುತ್ತಿರುವುದು ತಿಳಿದುಬಂದಿದೆ. ಈ ಕಟ್ಟಡವು ಸವಣೂರ ಪಟ್ಟಣದಿಂದ ದೂರದಲ್ಲಿದ್ದು, ಈ ಸ್ಥಳಾಂತರದಿಂದ ಸಾರ್ವಜನಿಕರಿಗೆ ತೀವ್ರ ತೊಂದರೆಯಾಗುತ್ತದೆ. ಆದ್ದರಿಂದ ಸ್ಥಳಾಂತರ ನಿರ್ಧಾರವನ್ನು ಕೈಬಿಟ್ಟು ಆಯುರ್ವೇದಿಕ್ ಮಹಾ ವಿದ್ಯಾಲಯ ಹಾಗೂ ಆಸ್ಪತ್ರೆಯನ್ನು ಇದೆ ಕಟ್ಟಡದಲ್ಲಿಯೇ ಪ್ರಾರಂಭಿಸುವುದಲ್ಲದೇ ಈ ಕಟ್ಟಡಕ್ಕೆ ಇನ್ನೂ ಅವಶ್ಯವಿರುವ ಅನುದಾನವನ್ನು ಕೂಡಲೇ ಬಿಡುಗಡೆಗೊಳಿಸಬೇಕೆಂದು ಕೋರಿದ್ದಾರೆ.

ತಾಲೂಕಾ ಸಾರ್ವಜನಿಕ ಆಸ್ಪತ್ರೆಯನ್ನು ಸಧ್ಯ ಕಾರ್ಯನಿರ್ವಹಿಸುತ್ತಿರುವ ಸ್ಥಳದಲ್ಲಿಯೇ ಮುಂದುವರೆಸುವುದಲ್ಲದೇ ಈ ಕಟ್ಟಡಕ್ಕೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಲು ಅನುದಾನ ಮಂಜೂರಾತಿ ನೀಡಬೇಕೆಂದು ಮನವಿ ಮಾಡಿದ್ದಾರೆ.

# ಗ್ಯಾಂಗ್ ರೇಪ್, ಮೂವರಿಗೆ ನ್ಯಾಯಾಂಗ ಬಂಧನ



**ಕೊಪ್ಪಳ:** ವಿದೇಶಿ ಮಹಿಳೆ ಮತ್ತು ಹೋಮ್‌ಸ್ಟೇ ಮಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ ಪ್ರಕರಣದ ಬಂಧಿತ ಮೂವರು ಆರೋಪಿಗಳನ್ನು 14 ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಗಂಗಾವತಿ ನ್ಯಾಯಾಲಯ ಆದೇಶ ಹೊರಡಿಸಿದೆ. ಆರೋಪಿಗಳಾದ ಮಲ್ಲೇಶ್, ಚೇತನಸಾಯಿ, ಶರಣಬಸವನನ್ನು ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ. ಗಂಗಾವತಿ ಗ್ರಾಮೀಣ ಠಾಣೆ ಪೊಲೀಸರು ನಿನ್ನೆ ರಾತ್ರಿ ಮೂವರು ಆರೋಪಿಗಳನ್ನು ನ್ಯಾಯಾಲಯ ಮುಂದೆ ಹಾಜರುಪಡಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶರು ಮೂವರು ಆರೋಪಿಗಳನ್ನು 14 ದಿನ ನ್ಯಾಯಾಂಗ ಬಂಧನಕ್ಕೆ ನೀಡಿ ಆದೇಶಿಸಿದ್ದಾರೆ. ಮೂವರು ಆರೋಪಿಗಳನ್ನು ಪೊಲೀಸರು ಕೊಪ್ಪಳ ಜೈಲಿಗಟ್ಟಿದ್ದಾರೆ. ಜಿಲ್ಲೆಯ ಗಂಗಾವತಿ ತಾಲೂಕಿನ ಸಣಾಪೂರ ಕೆರೆ ಸಮೀಪದ ತುಂಗಭದ್ರಾ ಎಡದಂಡೆ ಕಾಲುವೆ ಪಕ್ಕದಲ್ಲಿ ಕುಳಿತುಕೊಂಡು ನಕ್ಷತ್ರ ವೀಕ್ಷಿಸುತ್ತಿದ್ದ 5 ಜನ ವಿದೇಶಿ ಪ್ರವಾಸಿಗರ ಮೇಲೆ ಮೂವರು ದುಷ್ಕರ್ಮಿಗಳು ಹಲ್ಲೆ ನಡೆಸಿದ್ದರು. ಮೂವರು ಪುರುಷರನ್ನು ಕೆರೆಗೆ ತಳ್ಳಿ, ಇಬ್ಬರು ಮಹಿಳಾ ಪ್ರವಾಸಿಗರ ಮೇಲೆ ಅತ್ಯಾಚಾರವೆಸಗಿದ್ದರು.

# ಅನುದಾನ ಕಡಿತ: ರಾಜಣ್ಣ

**ಬೆಂಗಳೂರು:** ಕೇಂದ್ರದ ನ್ಯಾಷನಲ್ ಬ್ಯಾಂಕ್ ಫಾರ್ ಆಫ್ ಅಗ್ರಿಕಲ್ಚರ್ ಅಂಡ್ ರೂರಲ್ ಡೆವಲಪ್ ಮೆಂಟ್ ಈ ಬಾರಿ 3236 ಕೋಟಿ ರೂ. ಮಂಜೂರು ಮಾಡಿದ್ದು ಹಿಂದಿನ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಕಡಿಮೆ ಹಣ ಮಂಜೂರಾಗಿದೆ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಕಾಂಗ್ರೆಸ್ ಸದಸ್ಯ ದಿನೇಶ್ ಗೂಳಿಗೌಡ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು 2023–24ರಲ್ಲಿ 5600 ಸಾವಿರ ಕೋಟಿ ಮಂಜೂರಾಗಿತ್ತು. 2024–25ರಲ್ಲಿ 2,340 ಸಾವಿರ ಕೋಟಿ ಅನುದಾನ ಬಿಡುಗಡೆಯಾಗಿತ್ತು. ಈ ಸಂಬಂಧ ರಾಜ್ಯ ಸರ್ಕಾರ ಪತ್ರ ಬರೆದು ಮನವಿ ಮಾಡಿದಾಗ ಹೆಚ್ಚುವರಿಯಾಗಿ 896 ಕೋಟಿ ಬಿಡುಗಡೆ ಮಾಡಿದೆ. ಈ ಹಿಂದಿನ ವರ್ಷಗಳಲ್ಲಿ ಹೋಲಿಸಿದರೆ ಕಡಿಮೆ ಹಣಯಾಗಿದ್ದು ಇನ್ನಷ್ಟು ಹಣ ಬಿಡುಗಡೆ ಮಾಡುವಂತೆ ಪತ್ರ ಬರೆಯಲಾಗುವುದು ಎಂದು ಉತ್ತರಿಸಿದರು.

ಸಹಕಾರ ಸಂಘಗಳಿಗೆ ಹಣಕಾಸು ನೆರವು ನೀಡುವ ಪ್ರಮುಖ ಸಂಸ್ಥೆಗಳಲ್ಲಿ ನಬಾರ್ಡ್ ಒಂದಾಗಿದೆ. ಕಳೆದ ಐದು ವರ್ಷಗಳಿಗೆ ಹೋಲಿಸಿದರೆ ಈ ಬಾರಿ ಶೇ.58ರಷ್ಟು ಕಡಿಮೆ ಅನುದಾನ ಮಂಜೂರು ಮಾಡಿದೆ. ರಾಜ್ಯಕ್ಕೆ 9219 ಕೋಟಿ ಬಿಡುಗಡೆ ಮಾಡಬೇಕು ಎಂಬುದು ನಮ್ಮ ಮನವಿಯಾಗಿದೆ. ದೇಶದಲ್ಲಿ ರಾಜ್ಯಕ್ಕೆ ಕಡಿಮೆ ಹಣ ಬಿಡುಗಡೆ ಮಾಡಿದೆ. ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನ ಭೇಟಿ ಮಾಡಿ ಮನವಿ ಸಲ್ಲಿಸಿದ್ದಾರೆ. ಹೆಚ್ಚುವರಿ ಅನುದಾನ ಬಿಡುಗಡೆಯಾಗುವ ಅನ ಬಗ್ಗೆ ಆಶಾಭಾವನೆ ಇಟ್ಟುಕೊಳ್ಳಲಾಗಿದೆ ಎಂದರು.

# ಬಾಲ್ಡ್ವಿನ್ ಶಾಲಾ ವಿದ್ಯಾಸಂಸ್ಥೆಗಳ ಸಿಬ್ಬಂದಿ ಮತ್ತು ಮೆಥೋಡಿಸ್ಟ್ ಚರ್ಚ್ ನ ಭಕ್ತರಿಂದ ಪ್ರತಿಭಟನೆ




**ಬೆಂಗಳೂರು:** ರೆನಿಯಸ್ ಸ್ಟ್ರೀಟ್ ನ ರಿಚ್ಮಂಡ್ ಟೌನ್ ನ ಬಿಷಪ್ ಹೌಸ್ ನ ಮೇಲೆ ಒಂದು ಸಂಘಟಿತ ಗುಂಪು ದಾಳಿ ನಡೆಸಿ ಗೇಟು ಒಡೆದು ಮನೆಗೆ ಅಕ್ರಮ ಪ್ರವೇಶ ಮಾಡಿ ಭದ್ರತಾ ಸಿಬ್ಬಂದಿಯನ್ನು ಹಲ್ಲೆ ಮಾಡಿ, ಆಸ್ತಿ ಪಾಸ್ತಿಗಳನ್ನು ಧ್ವಂಸ ಮಾಡಿರುವುದನ್ನು ಖಂಡಿಸಿ ಬಾಲ್ಡ್ ವಿನ್ ಶಾಲಾ ವಿದ್ಯಾಸಂಸ್ಥೆಯ ಸಿಬ್ಬಂದಿ ಮತ್ತು ಮೆಥೋಡಿಸ್ಟ್ ಚರ್ಚ್ ನ ಭಕ್ತರು ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ರೆವೆರೆಂಡ್ , ಸಿಮಿಯನ್ ಕರ್ನಾಟಕ ಹೈಕೋರ್ಟ್ ನೀಡಿರುವ ಆದೇಶದ ವಿರುದ್ಧ ನಡೆಯಲಾದ ಕೃತ್ಯವಾಗಿದೆ, ಇಂತಹ ದಾಳಿಯ ಈ ಹಲ್ಲೆಯ ಹಿಂದೆಎನ್.ಎಲ್ .ಕರ್ಕರೆ ಇದ್ದಿದ್ದಾನೆ ಎಂಬ ಗಂಭೀರ ಶಂಕೆ ವ್ಯಕ್ತವಾಗಿದೆ. ಕರ್ಕರೆ ಪ್ರೇರಣೆಯಿಲ್ಲದೆ ಇತರರು ಬಂದು ಹಾನಿ ಮಾಡುವ ಸಾಧ್ಯತೆ ಇಲ್ಲ. ಇದು ನ್ಯಾಯಾಲಯದ ಆದೇಶವನ್ನು ಹುಸಿಗೊಳಿಸಿ ಮೆಥೋಡಿಸ್ಟ್ ಚರ್ಚ್ ಮತ್ತು ಬಾಲ್ಡ್ ವಿನ್ ಸಂಸ್ಥೆಗಳ ಮೇಲೆ ಭಯೋತ್ಪಾದನೆ ಮೂಡಿಸಲು ಸಂಚೋಚಿತ ದಾಳಿ ನಡೆಸಿ ಬಾರೀ ನಷ್ಟ ಉಂಟು ಮಾಡಿದ್ದಾರೆ,210ಕ್ಕೂ ಕ್ರಿಮಿನಲ್ ಮೊಕದ್ದಮೆಗಳು ದಾಖಲಾಗಿವೆ ಎಂದು ಆರೋಪಿಸಿದರು.

ಹೈಕೋರ್ಟ್ ನಿಂದ ಎನ್.ಎಲ್ .ಕರ್ಕರೆ ಬಿಷಪ್ ಆಗಿ ಮುಂದುವರೆಯಲು ತಡೆಯಾಜ್ಞೆ ಇದೆ, ಎಪ್ಪತ್ತು ವರ್ಷ ವಯಸ್ಸಾಗಿದ್ದು ಬಿಷಪ್ ಹುದ್ದೆಯಿಂದ ನಿವೃತ್ತಿಯಾಗಿದ್ದಾನೆ,ಮೂನ್ನೂರುರಿಂದ ನಾಲ್ಕುನೂರು ಕೋಟಿ ರೂಪಾಯಿ ದುರುಪಯೋಗ ಪಡಿಸಿಕೊಂಡಿದ್ದಾನೆ. ಎಲ್ಲ ಬಿಷಪ್ ಗಳು ನಿವೃತ್ತಿ ಹೊಂದಿದ್ದಾರೆ. ಇಲ್ಲಿ ತಿಂದಿರುವ ಹಣವನ್ನು ವಾಪಾಸ್ ಪಡೆಯಬೇಕೆಂದು ಹೇಳಿದರು.

ತಕ್ಷಣವೇ ಎನ್.ಎಲ್ .ಕರ್ಕರೆ ಮತ್ತು ಈ ದಾಳಿಯಲ್ಲಿ ಭಾಗಿಯಾದವರ ವಿರುದ್ಧ ದೂರು ದಾಖಲಿಸಿ, ಕಾನೂನು ಕ್ರಮ ಕೈಗೊಳ್ಳಬೇಕು,ಮೆಥೋಡಿಸ್ಟ್ ಚರ್ಚ್ ಮತ್ತು ಹಾಗೂ ಬಾಲ್ಡವೀನ್ ಸಂಸ್ಥೆಗಳ ಮೇಲೆ ಈ ರೀತಿಯ ದಾಳಿಗಳು ನಡೆಯದಂತೆ ಭದ್ರತೆ ಒದಗಿಸಬೇಕೆಂದು ಆಗ್ರಹಿಸಿದರು.

ವಕೀಲ ದೊರೆಸ್ವಾಮಿ ಮಾತನಾಡಿ, ಎಲ್.ಎನ್. ಕರ್ಕರೆ ಕಡೆಯವರು ಮೆಥೋಡಿಸ್ಟ್ ಚರ್ಚ್ ನ ಕಾನೂನು ಪ್ರಕಾರ ಮುಂದುವರೆಯಲು ಅಧಿಕಾರವಿಲ್ಲ, ಕರ್ಕರೆ ಕಡೆಯವರು ರಾತ್ರಿ ವೇಳೆ ಬಂದು ದಾಳಿ ನಡೆಸಿದ್ದಾರೆ ಈ ಕುರಿತು ಕಾನೂನು ಪ್ರಕಾರ ಕ್ರಮ ಕೈಗೊಳ್ಳಲು ಅಗತ್ಯ ಸಹಕಾರ ನೀಡಲಾಗುವುದು,ರಾತ್ರಿ ವೇಳೆ ಬಿಷಪ್ ನಿವಾಸದ ಮೇಲೆ ನಡೆದಿರುವ ದಾಳಿ ಅತ್ಯಂತ ಖಂಡನೀಯ ಈ ಕುರಿತು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಎಂದು ಹೇಳಿದರು.

# ಗಾಣಿಗ ಮಠಕ್ಕೆ ಹಣ ಬಿಡುಗಡೆ ಮಾಡಲು ತಾರತಮ್ಯ ಪೂರ್ಣಾನಂದ ಪುರಿ ಸ್ವಾಮೀಜಿ ಆರೋಪ




ಬೆಂಗಳೂರು ಮಾರ್ಚ್ 11; ವಿಶ್ವ ಗಾಣಿಗರ ಸಮುದಾಯ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರ ಬಿಡುಗಡೆ ಮಾಡಿದ್ದ 3.50ಕೋಟಿ ರೂಪಾಯಿ ಹಣದಲ್ಲಿ ಬಾಕಿ ಇರುವ ಒಂದು ಕೋಟಿ ರೂಪಾಯಿ ಹಣವನ್ನು ಆರ್ಥಿಕ ಇಲಾಖೆಯ ಅನುಮೋದನೆ ಇದ್ದರೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಚಿವರಾದ ಶಿವರಾಜ್ ತಂಗಡಗಿ ಬಿಡುಗಡೆ ಮಾಡವಲ್ಲಿ ತಾರತಮ್ಯ ಮಾಡುತ್ತಿದ್ದಾರೆ ಎಂದು ವಿಶ್ವ ಗಾಣಿಗ ಮಹಾಸಂಸ್ಥಾನ ಮಠದ ಪೂರ್ಣಾನಂದ ಪುರಿ ಸ್ವಾಮೀಜಿ ಆರೋಪಿಸಿದ್ದಾರೆ.

ಪ್ರೆಸ್ ಕ್ಲಬ್ ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,2022ರಲ್ಲಿ ಬಸವರಾಜ ಬೊಮ್ಮಾಯಿ ಅವರು ವಿಶ್ವ ಗಾಣಿಗರ ಮಠದ ಅಭಿವೃದ್ಧಿಗಾಗಿ 3.50ಕೋಟಿ ರೂಪಾಯಿ ಹಣವನ್ನು ಬಿಡುಗಡೆ ಮಾಡಿದ್ದರು, ಅದರಲ್ಲಿ 2023ರಲ್ಲಿ ಅಂದಿನ ಮುಖ್ಯಮಂತ್ರಿಗಳು ಆರ್ಥಿಕ ಇಲಾಖೆಯಿಂದ ಎರಡು ಕೋಟಿ ರೂಪಾಯಿ ಬಿಡುಗಡೆ ಮಾಡುವಂತೆ ಆದೇಶಿಸಿದ್ದರು, ಆರ್ಥಿಕ ಇಲಾಖೆಯ ಉಳಿಕೆ ಮೊತ್ತವಾದ ಒಂದೂವರೆ ಕೋಟಿ ರೂಪಾಯಿ ಹಣವನ್ನು ರದ್ದುಮಾಡಿರುವುದಿಲ್ಲ, ಆದರೆ 2024ರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅನುದಾನದ ಬಿಡುಗಡೆಗೆ ಮುಂದಿನ ಕ್ರಮಕ್ಕಾಗಿ ಆದೇಶ ನೀಡಿದ್ದರೂ,ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಾದ ಶಿವರಾಜ್ ತಂಗಡಗಿ ಹಣಕ್ಕಾಗಿ ಬೇಡಿಕೆ ಇಟ್ಟಿರುವುದು ಸ್ಪಷ್ಟವಾಗಿ ಗೋಚರಿಸಲಿದೆ ಎಂದು ಹೇಳಿದರು.

ನನ್ನಗೆ 85ವರ್ಷ ವಯಸ್ಸಾಗಿದ್ದು ನನ್ನ ವಯಸ್ಸಿಗೆ ಬೆಲೆ ನೀಡದೇ ಅವಮಾನಿತವಾಗಿ ನಡೆಸಿಕೊಂಡಿದ್ದಾರೆ,ಸಚಿವ ಶಿವರಾಜ್ ತಂಗಡಗಿಯವರು ನಡೆದುಕೊಂಡಿರುವ ರೀತಿ ಸರಿಯಲ್ಲ ಎಂದರು.

# ವಾಟರ್‌ಮ್ಯಾನ್‌ಗಳನ್ನುಸರ್ಕಾರಿನೌಕರರನ್ನಾಗಿ ಮಾಡಲು ಸಾಧ್ಯವಿಲ್ಲ: ಸಚಿವ ಬೈರತಿ ಸುರೇಶ್

**ಬೆಂಗಳೂರು:** ರಾಜ್ಯದ ಎಲ್ಲಾ ಮಹಾನಗರ ವ್ಯಾಪ್ತಿಯ ಜಲಮಂಡಳಿಗಳಲ್ಲಿ 13 ಸಾವಿರ ಮಂದಿ ವಾಟರ್‌ಮ್ಯಾನ್‌ಗಳಿದ್ದು, ಇವರನ್ನು ಸರ್ಕಾರಿ ನೌಕರರನ್ನಾಗಿ ಮಾಡಲು ಕಾನೂನಿನಲ್ಲಿ ಅವಕಾಶವಿಲ್ಲ ಎಂದು ನಗರಾಭಿವೃದ್ಧಿ ಇಲಾಖೆ ಸಚಿವ ಬೈರತಿ ಸುರೇಶ್ ತಿಳಿಸಿದ್ದಾರೆ.

ಹೊರಗುತ್ತಿಗೆ ಆಧಾರದ ಮೇರೆಗೆ ಕಾರ್ಯ ನಿರ್ವಹಿಸುತ್ತಿರುವ ನೀರು ಸರಬರಾಜು ನೌಕರರನ್ನು ಖಾಯಂಗೊಳಿಸಲು ಕಾನೂನಿನಲ್ಲಿ ಅವಕಾಶವಿಲ್ಲ. ಕಾರ್ಮಿಕ ಇಲಾಖೆ ನಿಗದಿಪಡಿಸಿದ ಕನಿಷ್ಟ ವೇತನ ನೀಡಲಾಗುತ್ತಿದೆ. ಅದೇ ರೀತಿ ಬಿಬಿಎಂಪಿ ಸೇರಿದಂತೆ ರಾಜ್ಯದಲ್ಲಿ 35 ಸಾವಿರ ಮಂದಿ ಪೌರಕಾರ್ಮಿಕರಿದ್ದಾರೆ. ಸರ್ಕಾರಿ ನೌಕರರಂತೆಯೇ ಪರಿಗಣಿಸಲಾಗುತ್ತಿದೆ ಸರ್ಕಾರದಿಂದ ವಿಶೇಷ ಅನುದಾನ ನೀಡಲಾಗಿದೆ ಎಂದು ವಿಧಾನಪರಿಷತ್ ಕಲಾಪದಲ್ಲಿ ಇಂದು ಬಿಜೆಪಿ ಸದಸ್ಯ ಡಿ.ಎಸ್.ಅರುಣ್ ಕೇಳಿದ ಪ್ರಶ್ನೆಗೆ ಉತ್ತರಿಸಿದರು.



ಬಿಬಿಎಂಪಿ ಹೊರತುಪಡಿಸಿ ಜಲಮಂಡಳಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಆಧಾರದ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುವ 1504 ವಾಟರ್‌ಮ್ಯಾನ್‌ಗಳಿದ್ದು ಇವರ ಕೆಲಸ ಖಾಯಂ ಕೋರಿ ಪೌರಾಡಳಿತ ನಿರ್ದೇಶ ನಾಲಯ ಪ್ರಸ್ತಾವನೆ ಸಲ್ಲಿಸಿತ್ತು. ಆರ್ಥಿಕ ಇಲಾಖೆಯು ಹೊರಗುತ್ತಿಗೆ ನೌಕರರ 'ನ್ನು ಯಥಾಸ್ಥಿತಿಯಂತೆ ಮುಂದುವರೆ ಸಬೇಕು. ಅಲ್ಲದೆ ಕನಿಷ್ಠ ವೇತನ ಕಾಯ್ದೆಯಂತೆ ವೇತನ ಪಾವತಿಸಬೇಕೆಂದು ಹೇಳಿದೆ.ಹೀಗಾಗಿ ಮಹಾನಗರ ಪಾಲಿಕೆಗಳಲ್ಲಿ ಕರ್ತವ್ಯ ನಿರ್ವಹಿಸು ತ್ತಿರುವ ನೌಕರರನ್ನು ಖಾಯಂ ನೌಕರರನ್ನಾಗಿ ಪರಿಗಣಿಸಲು ಸಾಧ್ಯವಿಲ್ಲ ಎಂದರು.

## ಮೊದಲ ಪುಟದಿಂದ

# ಗದ್ದಲ–ಕೋಲಾಹಲ

ಪಂಚ ಗ್ಯಾರಂಟಿ ಯೋಜನೆಗಳು ನಿಲ್ಲುವುದಿಲ್ಲ ಎಂದು ಹೇಳಿದರು. ಈ ನಡುವೆ ಆಡಳಿತ ಮತ್ತು ವಿಪಕ್ಷಗಳ ನಡುವೆ ಮಾತಿನ ಚಕಮಕಿ ನಡೆದು, ಗದ್ದಲ, ಕೋಲಾಹಲ ಸೃಷ್ಟಿಯಾಯಿತು.

ಎರಡೂ ಸಾಲಿನ ಸದಸ್ಯರುಗಳಿಗೆ ಸಭಾಧ್ಯಕ್ಷ ಯು.ಟಿಖಾದರ್ ಅವರು ಕೂರುವಂತೆ ತಾಕೀತು ಮಾಡಿದರಾದರೂ ಯಾವೊಬ್ಬ ಸದಸ್ಯರು ಅವರ ಮಾತನ್ನು ಕೇಳುವ ಸ್ಥಿತಿಯಲ್ಲಿರಲಿಲ್ಲ.ಈ ಸಂದರ್ಭದಲ್ಲಿ ಯಾರು ಏನು ಹೇಳುತ್ತಿದ್ದಾರೆ ಎಂಬುದೇ ತಿಳಿಯದಂತಾಯಿತು.

ಇದೇ ವೇಳೆ ಎರಡೂ ಸಾಲಿನ ಸದಸ್ಯರು ಸದನದ ಬಾವಿಗಿಳಿದು ಪ್ರತಿಭಟನೆ ನಡೆಸಿದರು. ಪ್ರತಿಭಟನೆ ನಡುವೆಯೇ ಸಭಾಧ್ಯಕ್ಷರು ಪ್ರಶ್ನೋತ್ತರ ಕಲಾಪವನ್ನು ಮುಂದುವರಿಸಿದರಾದರೂ, ಸದನದ ಬಾವಿಯಿಂದ ಯಾರೊಬ್ಬರೂ ಹೊರ ಬರಲಿಲ್ಲ. ಹೀಗೆ ಮಧ್ಯಾಹ್ನದವರೆಗೂ ಗದ್ದಲ–ಕೋಲಾಹಲ ಮುಂದುವರೆದಿತ್ತು.

# ಒಪ್ಪಿಸಿದ ಸಿಎಂ

ಆಸ್ಪತ್ರೆಗಳನ್ನು ಜಾರಿಗೊಳಿಸಲಾಗಿದೆ. ಕಾರ್ಮಿಕರ ಸೆಸ್ ಹಣದಿಂದ ಕಾರ್ಮಿಕ ಕಲ್ಯಾಣ ಮಂಡಳಿ ಸುಸಜ್ಜಿತ ಸಂಚಾರಿ ಆಸ್ಪತ್ರೆಗಳನ್ನು ಲೋಕಾರ್ಪಣೆಗೊಳಿಸಲಾಗಿದೆ ಎಂದರು.

ಕಟ್ಟಡ ಮತ್ತು ಇತರೆ ಕಾರ್ಮಿಕರ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು ಎನ್ನುವ ಕಾರಣದಿಂದ ಸರ್ಕಾರ ಕಾರ್ಮಿಕರ ಮಕ್ಕಳಿಗಾಗಿ ಉಚಿತ ಊಟ ಮತ್ತು ವಸತಿ ಶಾಲೆಗಳನ್ನು ತೆರೆಯಲಿದೆ ಎಂದು ಘೋಷಿಸಿದರು.

ಇವೆಲ್ಲಾ ಸವಲತ್ತುಗಳನ್ನು ಕಾರ್ಮಿಕರು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

# ವಕ್ಕರಿಸಿದ ಘಜ್ನಿ, ಘೋರಿ!!

ಹೆಸರಿಗಷ್ಟೇ. ಲೂಟರ್ ಉದ್ದೇಶ ಕೊಳ್ಳೆ ಹೊಡೆಯುವುದಷ್ಟೇ ಎಂದಿರುವ ಅವರು ಲೂಟರ್ ಯಾರು ಎಂಬುದನ್ನು ಹೇಳಿಲ್ಲ, ಅದಕ್ಕೆ ಅವರು ಯಾರ ಹೆಸರನ್ನೂ ತೆಗೆದುಕೊಂಡಿಲ್ಲ.

ಬಿಬಿಎಂಪಿ ವಿಭಜನೆ ಅಧಿಕಾರ, ಅಭಿವೃದ್ಧಿ ವಿಕೇಂದ್ರೀಕರಣವಲ್ಲ, ಇದು ಲೂಟಿಯ ವಿಕೇಂದ್ರೀಕರಣ ಎಂದು ಆಕ್ರೋಶ ವ್ಯಕ್ತಪಡಿಸಿರುವ ಅವರು; ಲೂಟಿಕೋರರಾದ ಮಹಮ್ಮದ್ ಘಜ್ನಿ, ಮೊಹಮದ್ ಘೋರಿ ಸಂಪದ್ಭರಿತ ಭಾರತವನ್ನು ಲೂಟಿಗೈದರು. ಬೆಂಗಳೂರಿಗೆ ಈಗೊಬ್ಬ ಘಜ್ನಿ, ಘೋರಿ ವಕ್ಕರಿಸಿದ್ದಾನೆ. ಲೂಟಿಗೆ 7 ದಾರಿ ಹುಡುಕುತ್ತಿದ್ದಾನೆ ಎಂದಿದ್ದಾರೆ. ಅಲ್ಲದೆ, ಏಳು ಪಾಲಿಕೆ ಹಾಳು ಪಾಲಿಕೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

# ಮೋದಿಗೆ ಸಿಎಂ ಮನವಿ

ಮನವಿ ಮಾಡಿದ್ದಾರೆ. ಕರ್ನಾಟಕದಲ್ಲಿ, ವಿಶೇಷವಾಗಿ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಲಕ್ಷಾಂತರ ಕೆಂಪು ಮೆಣಸಿನಕಾಯಿ ರೈತರ ಪರಿಸ್ಥಿತಿ ಕಂಡು ತೀವ್ರ ಕಳವಳದಿಂದ ನಾನು ನಿಮಗೆ ಬರೆಯುತ್ತಿದ್ದೇನೆ. ಮಾರುಕಟ್ಟೆಯಲ್ಲಿ ಕೆಂಪು ಮೆಣಸಿನಕಾಯಿ ಬೆಲೆ ತೀವ್ರ ಕುಸಿತ ಕಂಡಿದ್ದು, ರೈತರು ಸಂಕಷ್ಟ ಎದುರಿಸುತ್ತಿದ್ದಾರೆ. ಆಂಧ್ರಪ್ರದೇಶದಲ್ಲಿ ಕೆಂಪು ಮೆಣಸಿನಕಾಯಿಗಳಿಗೆ (ಗುಂಟೂರು ಮೆಣಸಿನಕಾಯಿ) ಮಾರುಕಟ್ಟೆ ಮಧ್ಯಸ್ಥಿಕೆ ಯೋಜನೆ (ಎಂಐಎಸ್) ಅಡಿಯಲ್ಲಿ ಬೆಲೆ ಕೊರತೆ ಪಾವತಿ (ಪಿಡಿಪಿ) ಯೋಜನೆಯನ್ನು ಭಾರತ ಸರ್ಕಾರ ನಿಗದಿಪಡಿಸಿದೆ. ಉತ್ಪಾದನೆಯ ಶೇ 25 ರಷ್ಟು ವರೆಗೆ ವ್ಯಾಪ್ತಿಯೊಂದಿಗೆ ಕ್ವಿಂಟಲ್‌ಗೆ 11,781 ಕನಿಷ್ಠ ಮಧ್ಯಸ್ಥಿಕೆ ಬೆಲೆ (ಎಂಐಪಿ) ನಿಗದಿಪಡಿಸಿದೆ. ಇದು ಸ್ವಾಗತಾರ್ಹ ಹೆಜ್ಜೆಯಾಗಿದ್ದರೂ, ಕರ್ನಾಟಕದ ಕೆಂಪು ಮೆಣಸಿನಕಾಯಿ ರೈತರು ಎದುರಿಸುತ್ತಿರುವ ಸಂಕಷ್ಟವನ್ನು ಇನ್ನೂ ಪರಿಹರವಾಗಿಲ್ಲ. ಕರ್ನಾಟಕದಲ್ಲಿ, ಗುಂಟೂರು ವಿಧದ ಕೆಂಪು ಮೆಣಸಿನಕಾಯಿ (ಮಳೆಯಾಶ್ರಿತ) ಬೆಳೆ ಬೆಳೆಯಲು ಕರ್ನಾಟಕ ಕೃಷಿ ದರ ಆಯೋಗದ ಕ್ವಿಂಟಲ್‌ಗೆ 12,675 ರೂ. ತಗಲುತ್ತೆ ಎಂದು ಅಂದಾಜಿಸಿದೆ. ಆದಾಗ್ಯೂ, ಸಿಂಧನೂರಿನಂತಹ ಪ್ರಮುಖ ಮಾರುಕಟ್ಟೆಗಳಲ್ಲಿ ರೈತರು ಕೆಂಪು ಮೆಣಸಿನಕಾಯಿಯನ್ನು ಕ್ವಿಂಟಲ್‌ಗೆ 28,300 ರೂ. ಕ್ಕಿಂತ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ. ಇದು ಭಾರಿ ಆರ್ಥಿಕ ನಷ್ಟಕ್ಕೆ ಕಾರಣವಾಗಿದೆ. ದೇಶದ ಅತ್ಯಂತ ಹಿಂದುಳಿದ ಮತ್ತು ಬರ ಪೀಡಿತ ಪ್ರದೇಶಗಳಲ್ಲಿ ಒಂದಾದ ಕಲ್ಯಾಣ ಕರ್ನಾಟಕ ಪ್ರದೇಶವು ಕೆಂಪು ಮೆಣಸಿನಕಾಯಿ ಕೃಷಿಯನ್ನು ಅವಲಂಬಿಸಿರುವ ಸಾವಿರಾರು ಸಣ್ಣ ಮತ್ತು ಅತಿಸಣ್ಣ ರೈತರ ನೆಲೆಯಾಗಿದೆ. ಅವರ ಸ್ಥಿತಿಯನ್ನು ನಿರಂತರವಾಗಿ ನಿರ್ಲಕ್ಷಿಸುವುದರಿಂದ ಆರ್ಥಿಕ ಸಂಕಷ್ಟ ಹೆಚ್ಚಾಗುತ್ತದೆ ಮತ್ತು ಅನೇಕ ರೈತರನ್ನು ಸಾಲದ ಬಿಕ್ಕಟ್ಟಿಗೆ ಸಿಲುಕಿಸಿದಂತಾಗುತ್ತದೆ. ಆದ್ದರಿಂದ, ಕೇಂದ್ರ ಸರ್ಕಾರವು ಮಾರುಕಟ್ಟೆ ಮಧ್ಯಸ್ಥಿಕೆ ಯೋಜನೆಯಡಿಯಲ್ಲಿ ಪಿಡಿಪಿಯನ್ನು ಕರ್ನಾಟಕಕ್ಕೂ ವಿಸ್ತರಿಸಬೇಕು ಎಂದು ಸಿಎಂ ಸಿದ್ದರಾಮಯ್ಯ ಪತ್ರದ ಮೂಲಕ ಮನವಿ ಮಾಡಿದ್ದಾರೆ.

# ತುಳಸಿ ಗಬ್ಬಾರ್ಡ್

ಸದೃಢ ಸಂಬಂಧಗಳು, ತಿಳಿವಳಿಕೆ ಮತ್ತು ಸಂಪರ್ಕದ ಮುಕ್ತ ಮಾರ್ಗಗಳನ್ನು ಸ್ಥಾಪಿಸುವುದು ಶಾಂತಿ, ಸ್ವಾತಂತ್ರ್ಯ ಮತ್ತು ಸಮೃದ್ಧಿ ಸಾಧಿಸುವ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪ್ರಯತ್ನದ ಭಾಗವಾಗಿ ನಾನು ಈ ಪ್ರವಾಸ ಕೈಗೊಂಡಿದ್ದೇನೆ ಎಂದು ಗಬ್ಬಾರ್ಡ್ ಹೇಳಿದ್ದಾರೆ. ತುಳಸಿ ಅವರು ಮೊದಲನೆಯದಾಗಿ ಹೊನಲುಲುವಿನಲ್ಲಿ ಬಂದಿಳಿಯಲಿದ್ದಾರೆ.

ಅಲ್ಲಿ ಅವರು ಐಸಿ ಸಹಭಾಗಿಗಳು ಮತ್ತು ಇಂಡೋ ಪಾಕಾರ (ಯುಎಸ್ ಇಂಡೋ ಪೆಸಿಫಿಕ್ ಕಮ್ಯಾಂಡ್) ಧುರೀಣರನ್ನು ಮತ್ತು ತರಬೇತಿ ನಿರತರಾಗಿರುವ ಅವರ ಪಡೆಗಳನ್ನು ಭೇಟಿಯಾಗಲಿದ್ದಾರೆ. ಸೆನೆಟ್ ದೃಢೀಕರಿಸಿದ ಮತ್ತು ಮೊದಲ ಮಹಿಳಾ ಹಿರಿಯ ರಾಷ್ಟ್ರೀಯ ಗುಪ್ತಚರ ನಿರ್ದೇಶಕಿಯಾಗಿ ನೇಮಕಗೊಂಡ ಬಳಿಕ ಇದು ತುಳಸಿ ಅವರ ಪ್ರಥಮ ಭಾರತ ಭೇಟಿಯಾಗಿದೆ.

ತುಳಸಿ ಅವರು ಈ ಮುನ್ನ ಟ್ರಂಪ್ ರೊಂದಿಗೆ ದ್ವಿಪಕ್ಷೀಯ ಮಾತುಕತೆಗಾಗಿ ಅಮೆರಿಕ ಪ್ರವಾಸ ಕೈಗೊಂಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಫೆಬ್ರವರಿಯಲ್ಲಿ ಶ್ವೇತಭವನದಲ್ಲಿ ಭೇಟಿಯಾಗಿದ್ದರು. ಫೆಬ್ರವರಿ 12 ರಂದು ಭಾರತೀಯ ನೇತಾರ ಅಮೆರಿಕ ರಾಜಧಾನಿಗೆ ಬಂದಿಳಿದ ಕೂಡಲೇ ಅವರನ್ನು ಭೇಟಿಯಾದ ಮೊದಲ ಅಮೆರಿಕದ ಅಧಿಕಾರಿ ಗಬ್ಬಾರ್ಡ್ ಅವರಾಗಿದ್ದರು.

# ದೆಹಲಿಗೆ ಯತ್ನಾಳ್

ಶಾ ಅವರು ಖಾಸಗಿ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳಲು ಬೆಂಗಳೂರಿಗೆ ಬಂದಿದ್ದ ವೇಳೆ ಅರವಿಂದ್ ಲಿಂಬಾವಳಿ ಶಾ ಅವರನ್ನು ಭೇಟಿ ಮಾಡಲು ಪ್ರಯತ್ನಿಸಿದ್ದರು. ಈ ವೇಳೆ ಶಾ ಅವರು ದೆಹಲಿಗೆ ಬರುವಂತೆ ಚೀಟಿ ಕಳುಹಿಸಿದ್ದರು. ಈ ಹಿನ್ನೆಲೆಯಲ್ಲಿ ಯತ್ನಾಳ್ ಹಾಗೂ ಲಿಂಬಾವಳಿ ದೆಹಲಿ ದೌಡಾಯಿಸಿದ್ದಾರೆ.

ಬಣ ಬಡಿದಾಟ ತಾರಾಕಕ್ಕೇರಿರುವ ಹಿನ್ನೆಲೆಯಲ್ಲಿ ಯತ್ನಾಳ್ ಬಣದ ಅಹವಾಲುಗಳನ್ನು ಸ್ವೀಕರಿಸಿ ಭಿನ್ನಮತಕ್ಕೆ ಶಮನಕ್ಕೆ ಪರಿಹಾರ ಕಂಡುಕೊಳ್ಳುವ ಪ್ರಯತ್ನ ಹೈಕಮಾಂಡ್ ಮಾಡಲಿದೆ. ಯಾವುದೇ ಕಾರಣಕ್ಕೂ ಬಿ.ವೈ. ವಿಜಯೇಂದ್ರ ಅವರನ್ನು ಮತ್ತೇ ಬಿಜೆಪಿ ರಾಜ್ಯಾಧ್ಯಕ್ಷರನ್ನಾಗಿ ಆಯ್ಕೆ ಮಾಡಬಾರದು. ಅವರ ಬದಲಿಗೆ ಬೇರೊಬ್ಬರನ್ನು ನೇಮಕ ಮಾಡಬೇಕೆಂದು ಯತ್ನಾಳ್ ಬಣ ವರಿಷ್ಠರಿಗೆ ಮನವಿ ಮಾಡಲು ಮುಂದಾಗಿದೆ. ಕಳೆದ ಕೆಲವು ದಿನಗಳ ಹಿಂದೆ ಯತ್ನಾಳ್ ಬಣ ದೆಹಲಿ ಭೇಟಿ ಕೈಗೊಂಡಿತು. ಆದರೆ ವರಿಷ್ಠರ ಭೇಟಿ ಸಾಧ್ಯವಾಗದ ಕಾರಣ ವಾಪಾಸ್ ಬಂದಿದ್ದರು. ಈಗ ಮತ್ತೇ ಹೈಕಮಾಂಡ್ ಅವರನ್ನು ಮತ್ತೆ ದೆಹಲಿಗೆ ಕರೆಸಿಕೊಂಡಿರುವುದು ಕುತೂಹಲ ಮೂಡಿಸಿದೆ.

ಯತ್ನಾಳ್ ಬಣದ ಭೇಟಿಯ ನಂತರ ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಅವರನ್ನು ದೆಹಲಿಗೆ ಕರೆಸಿಕೊಂಡು ಅವರಿಂದಲೂ ವರಿಷ್ಠರು ಅಹವಾಲು ಸ್ವೀಕರಿಸಲಿದ್ದಾರೆ. ತಮ್ಮ ವಿರುದ್ಧ ಯತ್ನಾಳ್ ಬಣ ನಡೆಸುತ್ತಿರುವ ಭಿನ್ನಮತಿ ಚಟುವಟಿಕೆ, ಬಹಿರಂಗ ಹೇಳಿಕೆ ನೀಡುತ್ತಿರುವ ಬಗ್ಗೆಯೂ ವರಿಷ್ಠರಿಗೆ ಮಾಹಿತಿ ನೀಡಲಿದ್ದಾರೆ. ಈ ತಿಂಗಳಾಂತ್ಯದ ವೇಳೆಗೆ ಬಿಜೆಪಿಗೆ ಹೊಸ ಸಾರಥಿಯನ್ನು ನೇಮಕ ಮಾಡುವ ಪ್ರಕ್ರಿಯೆ ಪೂರ್ಣಗೊಳ್ಳಲಿದೆ. ವಿಜಯೇಂದ್ರ ಅವರನ್ನೇ ಮುಂದುವರಿಸಬೇಕೆ ಇಲ್ಲವೇ ಆಯ್ಕೆ ಮಾಡಬೇಕೆ. ಒಂದು ವೇಳೆ ವಿಜಯೇಂದ್ರ ಅವರನ್ನು ಬದಲಿಸಿದರೆ ಯಾರಿಗೆ ಪಕ್ಷದ ಅಧ್ಯಕ್ಷ ಗಾದಿಯ ಹುದ್ದೆ ನೀಡಬೇಕು ಎಂಬ ಬಗ್ಗೆ ವರಿಷ್ಠರು ಗಂಭೀರ ಚಿಂತನೆ ನಡೆಸಿದ್ದಾರೆ ಮೂಲಗಳು ತಿಳಿಸಿದ್ದಾರೆ.

# ನಾಯಕನ ಹತ್ಯೆ

ವಿಷ ವೈಯಲ್ಲಿ ಹರಡಿ ತೀವ್ರ ಅಸ್ವಸ್ಥರಾಗಿದ್ದ ಯಾದವ್ ಅವರನ್ನು ಚಿಕಿತ್ಸೆಗಾಗಿ ಅಲಿಗಢ ಆಸ್ಪತ್ರೆಗೆ ಕರೆದೊಯ್ಯುವ ವೇಳೆ ಮಾರ್ಗಮಧ್ಯೆಯೇ ಮೃತಪಟ್ಟಿದ್ದಾರೆ. ಕುಟುಂಬಸ್ಥರಿಂದ ಯಾವುದೇ ದೂರು ಬಂದಿಲ್ಲವಾದರೂ, ಪ್ರಕರಣದ ತನಿಖೆಗಾಗಿ ಪೊಲೀಸ್ ತಂಡವನ್ನು ರಚಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಯಾದವ್ ಬಿಜೆಪಿಯ ಮುಖಂಡರಾಗಿದ್ದು, ಇಲ್ಲಿನ ವಿಧಾನಸಭಾ ಉಪಚುನಾವಣೆಯಲ್ಲಿ ಸ್ಪರ್ಧಿಸಿದ್ದರು. ರಾಜಕೀಯ ಕಾರಣಗಳಿಗೆ ಅವರನ್ನು ಹತ್ಯೆ ಮಾಡಲಾಗಿದೆಯೇ ಎಂಬುದನ್ನು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

# ಬೊಮ್ಮಾಯಿ ಧನ್ಯವಾದ

100 ಕೋಟಿ ಅನುದಾನ ಬಿಡುಗಡೆ ಮಾಡಿರುವುದರಿಂದ ಈ ದೇವಸ್ಥಾನಕ್ಕೆ ಬರುವ ಸಾವಿರಾರು ಭಕ್ತರಿಗೆ ಆಧುನಿಕ ಸೌಲಭ್ಯಗಳು ದೊರೆಯುವಂತಾಗಲಿದೆ. ಭಕ್ತರಲ್ಲಿ ದೇವಸ್ಥಾನದ ಬಗ್ಗೆ ಸಕಾರಾತ್ಮಕ ಭಾವನೆ ಮೂಡುವ ವಿಶ್ವಾಸ ಇದೆ ಎಂದು ತಿಳಿಸಿದ್ದಾರೆ.

# ಲೋಕ ಅದಾಲತ್: ರಾಜಿ ಸಂಧಾನದ ಮೂಲಕ 293 ಪ್ರಕರಣಗಳು ಇತ್ಯರ್ಥ

**ನಾಗಮಂಗಲ:** ಕ್ಷುಲ್ಲಕ ಕಾರಣಕ್ಕೆ ಅಥವಾ ಅಣ್ಣ-ತಮ್ಮಂದಿರು ಸೇರಿದಂತೆ ಇತರರು ತಮ್ಮ ವೈಮನಸ್ಸಿನಿಂದ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿರುತ್ತಾರೆ. ಇಂತಹ ಕೆಲವೊಂದು ರಾಜಿಯಾಗಬಲ್ಲ ಪ್ರಕರಣಗಳನ್ನು ಲೋಕ ಅದಾಲತ್ ಕಾರ್ಯಕ್ರಮದಲ್ಲಿ ಇತ್ಯರ್ಥ ಪಡಿಸಿಕೊಳ್ಳಲಿ ಎಂದು ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರಾದ ಯೋಗೇಶ್ ತಿಳಿಸಿದ್ದಾರೆ.

ಪಟ್ಟಣದ ನಾಲ್ಕು ವಿಭಾಗಗಳ ನ್ಯಾಯಾಲಯಗಳಲ್ಲಿ ಲೋಕ ಅದಾಲತ್ ನಲ್ಲಿ ಇತ್ಯರ್ಥಕ್ಕೆ ಬಾಕಿ ಇದ್ದ ವಿವಿಧ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ 1.75 ಕೋಟಿ ರೂಗಳಿಗೂ ಅಧಿಕ ಮೌಲ್ಯದ 293 ಪ್ರಕರಣಗಳನ್ನು ನ್ಯಾಯಾಧೀಶರು ರಾಜಿ ಸಂಧಾನದ ಮೂಲಕ ಇತ್ಯರ್ಥ ಗೊಳಿಸಿದರು.

ಅಪಾರ ಹಿರಿಯ ಶ್ರೇಣಿಯ ನ್ಯಾಯಾಲಯದಲ್ಲಿ 2025 ರ ಮಾರ್ಚ್ ತಿಂಗಳ ಅಂತ್ಯಕ್ಕೆ ಇತ್ಯರ್ಥಕ್ಕೆ ಬಾಕಿ ಇರುವ 1445 ಪ್ರಕರಣಗಳ ಪೈಕಿ 173 ಪ್ರಕರಣಗಳನ್ನು ರಾಜಿ ಸಂಧಾನಕ್ಕೆ ಕೈಗೆತ್ತಿಕೊಳ್ಳಲಾಗಿತ್ತು. ಇದರಲ್ಲಿ 42.30.596 ಆರ್ಥಿಕ ಮೌಲ್ಯವುಳ್ಳ 45 ಪ್ರಕರಣಗಳು ಇತ್ಯರ್ಥ ಗೊಂಡವು. ಪ್ರಧಾನ ಸಿವಿಲ್ ನ್ಯಾಯಾಧೀಶರಲ್ಲಿ 2025 ಮಾರ್ಚ್ ತಿಂಗಳ ಅಂತ್ಯಕ್ಕೆ ಬಾಕಿ ಇರುವ 2271 ಪ್ರಕರಣಗಳ ಪೈಕಿ 181 ಪ್ರಕರಣಗಳು ರಾಜಿ ಸಂಧಾನಕ್ಕೆ ಕೈಗೆತ್ತಿಕೊಳ್ಳಲಾಗಿದ್ದು ಇದರಲ್ಲಿ 39.30 ಲಕ್ಷ ಆರ್ಥಿಕ ಮೌಲ್ಯವುಳ್ಳ 27 ಪ್ರಕರಣಗಳು ಇತ್ಯಾದಿಗೊಂಡವು.

ಹಿರಿಯ ಶ್ರೇಣಿಯ ನ್ಯಾಯಾಲಯದಲ್ಲಿ 2025 ಮಾರ್ಚ್ ಅಂತ್ಯಕ್ಕೆ ಬಾಕಿ ಇರುವ 2261 ಪ್ರಕರಣಗಳ ಪೈಕಿ 235 ಪ್ರಕರಣಗಳು ಲೋಕ ಅದಾಲತ್ ನಲ್ಲಿ ರಾಜಿ ಸಂಧಾನಕ್ಕೆ ಕೈಗೆತ್ತಿಕೊಂಡಿದ್ದು ಈ ಪೈಕಿ 75.38 ಲಕ್ಷ ರು ಆರ್ಥಿಕ ಮೌಲ್ಯವುಳ್ಳ 121 ಪ್ರಕರಣಗಳು ಎರಡು ಕಡೆಯ ಕಕ್ಷಿದಾರರು ಮತ್ತು ವಕೀಲರ ಸಮಕ್ಷಮದಲ್ಲಿ ಇತ್ಯರ್ಥಗೊಂಡವು.

ಬ್ಯಾಂಕ್ ಸೇರಿದಂತೆ ವಿವಿಧ ಇಲಾಖೆಗೆ ಸಂಬಂಧಿಸಿದ 11806 ಪ್ರಕರಣ ರಾಜಿ ಸಂಧಾನಕ್ಕೆ ಕೈಗೆತ್ತಿಕೊಂಡಿದ್ದು 37.69. 494 ಆರ್ಥಿಕ ಮೌಲ್ಯವುಳ್ಳ 1116 7 ಪ್ರಕರಣಗಳು ಇತ್ಯರ್ಥಗೊಂಡವು. ಈ ವೇಳೆ ಹಿರಿಯ ಶ್ರೇಣಿಯ ನ್ಯಾಯಾಧೀಶ ಯೋಗೇಶ್ ಮಾತನಾಡಿ ಕಾನೂನಿನ ಅರಿವಿನ ಕೊರತೆಯಿಂದಾಗಿ ಗ್ರಾಮೀಣ ಪ್ರದೇಶದ ಜನರು ರಾಜಿಯಾಗಬಲ್ಲ ಅಪರಾಧಿಕ ಪ್ರಕರಣ, ಬ್ಯಾಂಕ್ ವಸೂಲಾತಿ, ಕೈಗಾರಿಕಾ ಕಾರ್ಮಿಕರ ಪ್ರಕರಣಕ್ಕೆ ಸಂಬಂಧಿಸಿದ ಕ್ಲೈಂ ಗಳು ಉದ್ಯೋಗದಲ್ಲಿ ಪುನರ್ ಸ್ಥಾಪಿಸುವ ಪ್ರಕರಣ, ವೈವಾಹಿಕ ಕುಟುಂಬದ ನ್ಯಾಯಾಲಯದ ಪ್ರಕರಣಗಳು, ಸಾಲ ವಸತಿ ಪ್ರಕರಣಗಳು, ಅಪಘಾತ ಪ್ರಕರಣಗಳು, ಕಾರ್ಮಿಕ ವಿವಾದಗಳು, ವೇತನ ಮತ್ತು ಭತ್ಯೆಗಳಿಗೆ ಸಂಬಂಧಿಸಿದ



ಸೇವಾ ಪ್ರಕರಣಗಳು, ರಾಜಿಯಾಗಬಲ್ಲ ಸಿವಿಲ್ ಪ್ರಕರಣಗಳನ್ನು ಲೋಕ ಅದಾಲತ್ ಕಾರ್ಯಕ್ರಮದಲ್ಲಿ ಇತ್ಯರ್ಥ ಪಡಿಸಿಕೊಳ್ಳಬಹುದು ಎಂದು ಹೇಳಿದರು.

ಇಂತಹ ಪ್ರಕರಣಗಳಲ್ಲಿ ದ್ವೇಷ ವೈಶ್ಯಮ್ಯ ಜೊತೆಗೆ ಹಣ ಹಾಗೂ ಸಮಯ ವ್ಯರ್ಥವಾಗುವುದೇ ಹೊರತು ಯಾವುದೇ ಸಾಧನೆ ಮಾಡಿದಂತಾಗುವುದಿಲ್ಲ ಹಣ ಹಾಗೂ ಸಮಯ ವ್ಯರ್ಥ್ಯವಿಲ್ಲದೆ ನ್ಯಾಯಾಲಯದಲ್ಲಿರುವ ತಮ್ಮ ವ್ಯಾಜ್ಯಗಳನ್ನು ರಾಜಿ ಸಂಧಾನದ ಮೂಲಕ ಕಕ್ಷಿದಾರರು ಸಹೋದರತ್ವ ಭಾವನೆಯಿಂದ ಸೌಹಾರ್ದತೆಯುತ ಬದುಕು ನಡೆಸಿ ಬೇಕು ಸಣ್ಣಪುಟ್ಟ ಜಗಳವನ್ನೇ ದೊಡ್ಡದಾಗಿ ಮಾಡಿಕೊಂಡು ವ್ಯಕ್ತಿ ಪ್ರತಿಷ್ಠೆಗಾಗಿ ನ್ಯಾಯಾಲಯದ ಮೆಟ್ಟಿಲು ಹೇರಬಾರದು ಎಂದು ಹೇಳಿದರು.

ಕಳೆದ 2005ರಲ್ಲಿ ಮಂಡ್ಯದ ನ್ಯಾಯಾಲಯದಲ್ಲಿ ದಾಖಲಾಗಿದ್ದ ಪ್ರಕರಣ ನಾಗಮಂಗಲದ ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಲಯಕ್ಕೆ ವರ್ಗಾವಣೆಯಾಗಿತ್ತು, 23 ವರ್ಷಗಳ ಹಿಂದಿನ ಈ ಪ್ರಕರಣವನ್ನು ಎರಡು ಕಡೆಯ ಕಕ್ಷಿದಾರರು ಮತ್ತು ವಕೀಲರ ಸಮಕ್ಷಮದಲ್ಲಿ ನ್ಯಾಯಾಧೀಶ ಎಂ ನರಸಿಂಹಮೂರ್ತಿ ಅವರು ಇತ್ಯರ್ಥ ಪಡಿಸಿದರು.

ಕಳೆದ 12 ವರ್ಷಗಳಿಂದ ಇತ್ಯರ್ಥಕ್ಕೆ ಬಾಕಿ ಇದ್ದ ಜಮೀನು ವಿವಾದ ಪ್ರಕರಣ ಒಂದನ್ನು ನ್ಯಾಯಾಧೀಶರಾದ ಕೆ.ಪಿ ಸಿದ್ದಪ್ಪಾಜಿ ಇತ್ಯರ್ಥ ಪಡಿಸಿದರು. ಲೋಕ ಅದಾಲತ್ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಲು ಕಾರಣ ಕರ್ತರಾದ ವಕೀಲರು ಹಾಗೂ ವಕೀಲ ಸಂಘದ ಪಾದಾಧಿಕಾರಿಗಳು ನ್ಯಾಯಾಲಯದ ಸಿಬ್ಬಂದಿಗಳು ಹಿರಿಯ ಸಿವಿಲ್ ನ್ಯಾಯಾಧೀಶರಿಗೆ ಯೋಗೇಶ್ ರವರು ಅಭಿನಂದನೆ ಸಲ್ಲಿಸಿದರು.

ಇದೇ ಸಂದರ್ಭದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರಾದ ಅರುಣಾಬಾಯಿ ಹಾಗೂ ಟಿ ಆರ್ ಶ್ರೀದೇವಿ, ಕಾನೂನು ಸೇವಾ ಸಮಿತಿಯ ಸೋನು ಮೂರ್ತಿ, ವಕೀಲ ಸಂಘದ ಅಧ್ಯಕ್ಷ ಮಹದೇವು, ವಕೀಲರಾದ ಹರ್ಷ, ಸುಬ್ರಹ್ಮಣ್ಯ, ಕೆ.ಪಿ ಶಿವಮೂರ್ತಿ ಎಂ.ಎಸ್ ರವಿಕುಮಾರ್, ಪ್ರಭುಸ್ವಾಮಿ ಸೇರಿದಂತೆ ನ್ಯಾಯಾಲಯದ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಗುಣಮಟ್ಟದ ರಾಗಿ ಪೂರೈಕೆಗೆ ಶಾಸಕರ ಸಲಹೆ

**ಮಾಗಡಿ:** ರೈತರು ಗುಣಮಟ್ಟದ ರಾಗಿ ಪೂರೈಕೆ ಮಾಡುವಂತೆ ಶಾಸಕ ಎಚ್.ಸಿ.ಬಾಲಕೃಷ್ಣ ಹೇಳಿದರು.

ತಾಲೂಕಿನ ಸೋಲೂರು ರಾಗಿ ಖರೀದಿ ಕೇಂದ್ರಕ್ಕೆ ಸೋಮವಾರ ಬೇಟಿ ನೀಡಿ ಪರಿಶೀಲನೆ ನಡೆಸಿದ ನಂತರ ಮಾತನಾಡಿದ ಅವರು, ಕಳೆದ ಭಾರಿ ಕೆಲ ರೈತರು ಇಟ್ಟಿಗೆ, ಇತರೆ ವಸ್ತುಗಳ ಮಿಶ್ರಿತ ಕಳಫೆ ರಾಗಿ ವಿತರಿಸಿರುವ ಬಗ್ಗೆ ನನ್ನ ಗಮನಕ್ಕೆ ಬಂದಿದ್ದು ಈ ಭಾರಿ ಆ ರೀತಿ ನಡೆಯದಂತೆ ರೈತರು ನಿಗಾವಹಿಸಬೇಕು. ರೈತರಿಂದ ಖರೀದಿಸಿದ ರಾಗಿ ನೇರವಾಗಿ ನ್ಯಾಯಬೆಲೆ ಅಂಗಡಿಗಳಿಂದ ನಾಗರೀಕರಿಗೆ ವಿತರಿಸಲಾಗುತ್ತದೆ ಅಲ್ಲಿ ಉಪಯೋಗಿಸುವರು ನಿಮ್ಮ ಸಹೋದರರೆ ಆಗಿರುತ್ತಾರೆ. ಮಾ. 10 ರಿಂದ ಇಂದಿನಿಂದ 3 ತಿಂಗಳ ಕಾಲ ರಾಗಿ ಖರೀದಿಸಲಾಗುವುದು, ನೋಂದಣಿಯಾಗಿರುವ ಎಲ್ಲಾ ರೈತರಿಂದ ರಾಗಿ ಖರೀದಿಸಲಾಗುವುದು ರೈತರಲ್ಲಿ ಆತಂಕ ಬೇಡ, ಸರಕಾರ ಪ್ರತಿ ಕ್ವಿಂಟಾಲ್ ರಾಗಿಗೆ 4290 ರೂ ನಿಗಧಿಪಡಿಸುವ ಮೂಲಕ ಉತ್ತಮ ಬೆಲೆ ನೀಡಿದೆ ರೈತರು ಇದರ ಸದುಪಯೋಗ ಪಡಿಸಿಕೊಳ್ಳಿ ಎಂದು ರೈತರಿಗೆ ಶಾಸಕರು ಮನವಿ ಮಾಡಿದರು.

ರಾಗಿ ಸಂಗ್ರಹಿಸಲು ಗೋದಾಮು ನಿರ್ಮಿಸಲು 3 ತಿಂಗಳ ಕಾಲ ಮಾತ್ರ ರಾಗಿ ಖರೀದಿಗೆ ಅವಕಾಶ ಇರುವುದರಿಂದ ಮತ್ತೆ ಗೋದಾಮಿನ ಅವಶ್ಯಕತೆ ಇಲ್ಲದ ಗೋದಾಮಿನ ಅವಶ್ಯಕತೆ ಇಲ್ಲ ಇದರಿಂದಾಗಿ ಖಾಸಗಿ ಅವರ ಗೋದಾಮಿನಲ್ಲಿ ರಾಗಿ ಖರೀದಿಸಲಾಗುತ್ತಿದೆ. ಕಸಬಾ ಹಾಗೂ ಮಾಡಬಾಳ್ ವ್ಯಾಪ್ತಿಯಲ್ಲಿ ರಾಗಿ ಖರೀದಿ ಕೇಂದ್ರ ಆರಂಭಿಸಲು ಸಂಬಂಧ ಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ಖರೀದಿ ಕೇಂದ್ರಕ್ಕೆ ಬೇಕಾದ ಅಗತ್ಯ ಮೂಲಭೂತ ಸೌಲಭ್ಯ ಒದಗಿಸಿ ಆರಂಭಿಸಲು ಕ್ರಮಕೈಗೊಳ್ಳುವುದಾಗಿ ತಿಳಿಸಿದರು.



ನೆಲಮಂಗಲ ಶಾಸಕ ಶ್ರೀನಿವಾಸ್, ನಾವು ಕಳೆದ ಭಾರಿಯೂ ರಾಗಿ ಖರೀದಿ ಕೇಂದ್ರಕ್ಕೆ ಬರುವ ರೈತರಿಗೆ ತಿಂಡಿ,ಊಟ, ಶೌಚಾಲಯ, ನೀರಿನ ವ್ಯವಸ್ಥೆ ಕಲ್ಪಿಸಲಾಗಿತ್ತು ಅದೇ ರೀತಿ ಮುಂದುವರೆಸಲಾಗುವುದು. ರಾಗಿ ಖರೀದಿ ಕೇಂದ್ರಕ್ಕೆ ಬರುವ ರೈತರೊಂದಿಗೆ ಅಧಿಕಾರಿಗಳು ಸಂಯಮದಿಂದ ನಡೆದುಕೊಳ್ಳಬೇಕು. ರಾಗಿ ಖರೀದಿ ಕೇಂದ್ರದಿಂದ ರೈತರಿಗೆ ವಂಚನೆ, ಮೋಸ, ದಬ್ಬಾಳಿಕೆ ನಡೆದರೆ ಅಂಥಹ ಅಧಿಕಾರಿಗಳ ವಿರುದ್ದ ಕಠಿಣ ಕ್ರಮಕೈಗೊಳ್ಳುವುದಾಗಿ ಶಾಸಕ ಎಚ್.ಸಿ.ಬಾಲಕೃಷ್ಣ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮದ ಜಿಲ್ಲಾ ವ್ಯವಸ್ಥಾಪಕ ರಮೇಶ್ ಮಾತನಾಡಿ, ನೊಂದಣಿ ಮಾಡಿಸಿರುವ ರೈತರೆ ಕುದ್ದಾಗಿ ಬಂದು ಬೆರಳಚ್ಚು ನೀಡಬೇಕು. ರೈತರೆಲ್ಲರೂ ಒಂದೇ ದಿನ ಖರೀದಿ ಕೇಂದ್ರಕ್ಕೆ ಬಂದು ಎರಡುಮೂರು ದಿನಗಳ ಕಾಲ ಕಾಯಬಾರದು ನೊಂದಣಿಯಾಗಿರುವ ಪ್ರತಿ ರೈತರಿಂದಲ್ಲೂ ರಾಗಿ ಖರೀದಿ ಮಾಡಲಾಗುತ್ತದೆ. ಭಾನುವಾರ ಮತ್ತು ಸರಕಾರಿ ರಜೆ ದಿನಗಳಂದು ರಾಗಿ ಖರೀದಿ ಕೇಂದ್ರದಲ್ಲಿ ಖರೀದಿ ಇರುವುದಿಲ್ಲ, ರಾಗಿ ಖರೀದಿ ಕೇಂದ್ರದ ಆವರಣದಲ್ಲಿ ನೆರಳಿನ ವ್ಯವಸ್ಥೆ, ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಕಲ್ಪಿಸಲಾಗಿದೆ.

10,479 ರೈತರು ನೊಂದಣಿ ಮಾಡಿಸಿದ್ದು, ಒಂದು ಎಕರೆಗೆ 10 ಕ್ವಿಂಟಾಲ್, 2 ಎಕರೆಗೆ 20 ಕ್ವಿಂಟಾಲ್ ರಾಗಿ ಖರೀದಿಸಲಾಗುವುದು. 1,56,851 ಕ್ವಿಂಟಾಲ್ ರಾಗಿ ಖರೀದಿ ಮಾಡಲಾಗುವುದು ಎಂದರು.

ರಾಗಿ ಖರೀದಿ ಕೇಂದ್ರಕ್ಕೆ ಶಾಸಕರು ಬೇಟಿ ನೀಡಿದ ವೇಳೆ ವಿದ್ಯುತ್ ದೀಪದ ವ್ಯವಸ್ಥೆ ಇಲ್ಲದೆ ಖರೀದಿ ಕೇಂದ್ರ ಕಗ್ಗತಲ್ಲೆ ಯಾಗಿತ್ತು ಬಗ್ಗೆ ಅಧಿಕಾರಿಗಳ ಬಳಿ ಪ್ರಶ್ನಿಸಿದಾಗ ಕಳೆದ ಭಾರಿ ವಿದ್ಯುತ್ ನಿಂದಾಗಿ ಅಪಾರ ಬೆಲೆ ಬಾಳುವ ಗೋಣಿ ಚೀಲಗಳು ಸುಟ್ಟುಹೋದ ಕಾರಣ ದೀಪದ ವ್ಯವಸ್ಥೆ ಅಳವಡಿಸಿಲ್ಲ ಎಂದ ವೇಳೆ ಸೋಲೂರು ದೀಪದ ವ್ಯವಸ್ಥೆ ಕಲ್ಪಿಸಿ ಇದಕ್ಕೆ ಬೇಕಾದ ಹಣವನ್ನು ವಯಕ್ತಿಕವಾಗಿ ನೀಡುವುದಾಗಿ ಶಾಸಕ ಎಚ್.ಸಿ.ಬಾಲಕೃಷ್ಣ ಸೂಚಿಸಿದರು.

ತಾಲೂಕು ಟಿಎಪಿಸಿಎಂಎಸ್ ಅಧ್ಯಕ್ಷ ಶಿವಪ್ರಸಾದ್, ಮಾಜಿ ಅಧ್ಯಕ್ಷ ಹೊನ್ನಪ್ಪ, ಗ್ರಾ.ಪಂ. ಮಾಜಿ ಅಧ್ಯಕ್ಷ ನಾಗರುದ್ರ ಶರ್ಮ, ರಾಗಿ ಖರೀದಿ ಕೇಂದ್ರದ ಅಧಿಕಾರಿ ಶಾಂತ, ಆಪರೇಟರ್ ಪ್ರಶಾಂತ್,ಅದರಂಗಿ ದೀಪು ಇತರರು ಇದ್ದರು.

# ಆತ್ಮ ಚಿಂತನೆಯಿಂದ ಜೀವನ ಪಾವನ

**ಮಾಗಡಿ:** ಮನುಷ್ಯ ಆತ್ಮ ಚಿಂತನೆಯಿಂದ ನಡೆದಾಗ ಜೀವನ ಪಾವನ ಎಂದು ಸಿದ್ದಗಂಗಾ ಮಠದ ಸಿದ್ದಲಿಂಗಸ್ವಾಮೀಜಿ ಹೇಳಿದರು.

ತಾಲೂಕಿನ ವೀರಾಪುರ ಗ್ರಾಮದಲ್ಲಿ ಸೋಮವಾರ ಶ್ರೀನಾಗಲಕ್ಷ್ಮಿ ರಾವಳೇಶ್ವರ ನೂತನ ದೇವಾಲಯದ ಜೀರ್ಣೋದ್ದಾರ ಹಾಗೂ ವಿಗ್ರಹ ಪ್ರತಿಷ್ಠಾಪನಾ ಮಹೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ನಿನ್ನೊಳಗೆ ನೀ ಹೊಕ್ಕು, ನಿನ್ನ ನೀನೇ ಕಂಡು, ನೀನು ನೀನಾಗು ಅಂದಾಗಲೇ ನಿನ್ನ ಜೀವನ ಅರ್ಥವಾಗಲಿದೆ. ನಿನ್ನ ಜೀವನ ಪ್ರಯಾಣ ಸುಖಕರವಾಗಲಿದೆ. ಈ ಭೂಮಿಯ ಮೇಲೆ ವಸ್ತು ವ್ಯಕ್ತಿಗಳ ಸಂಬಂಧದಿಂದ ಜಗತ್ತು ನಡೆದಿದೆ. ಮನುಷ್ಯ ಆತ್ಮ ಚಿಂತನೆಯಿಂದ ನಡೆದಾಗ ಜೀವನ ಪಾವನಗೊಳ್ಳಲಿದೆ.ಮನುಷ್ಯ ಕಾಲವನ್ನು ನಡೆಯಬೇಕು ಆಯುಷ್ಯದ ಬಗ್ಗೆ ವಿಚಾರ ಮಾಡಬಾರದು, ಇಂದಿನ ದಿನದ ವಿಚಾರ ಮಾಡಿ ಸುಖ ಪಡೆಯಬೇಕು ಒರತು ಹಿಂದಿನದು ಮುಂದಿನದು ಚಿಂತಿಸಿ ಜೀವನ ಸುಖ ಸಂತೋಷ ನೆಮ್ಮದಿ ಕಳೆದು ಕೊಳ್ಳಬಾರದು ಎಂದರು.

ಮುಂಜಾನೆ ಉತ್ತಮ ವಿಚಾರದಿಂದ ಏಳಬೇಕು. ತಾಯಿ, ತಂದೆ, ದೇವರ ಸ್ಮರಣೆ ಮಾಡಿ ಅವರ ಋಣ ತೀರಿಸಲು ಪ್ರತಿ ಮನುಷ್ಯ ಮುಂದಾಗಬೇಕು. ದುಶ್ಚಟಗಳಿಗೆ ಬಲಿಯಾಗದೇ ಗುರು ಹಾಕಿಕೊಟ್ಟಂತಹ ಸನ್ಮಾರ್ಗದಲ್ಲಿ ನಡೆದು ತಂದೆ-ತಾಯಿಯ ಮತ್ತು ಗುರುವಿನ ಋಣವನ್ನು ತೀರಿಸುವ ಮೂಲಕ ಮಾದರಿಯಾಗುವಂತೆ ಬದುಕಬೇಕು. ತಂದೆ-ತಾಯಿ ನಮ್ಮ ಭವಿಷ್ಯವನ್ನು ರೂಪಿಸಲು ಸಾಕಷ್ಟು ಕಷ್ಟಪಟ್ಟಿರುತ್ತಾರೆ ಅವರ ತ್ಯಾಗ ಯಾವತ್ತೂ ತೀರಿಸುವುದಕ್ಕಾಗುವುದಿಲ್ಲ ಇವನ್ನೆಲ್ಲವನ್ನು ಅರಿತು ಭವ್ಯ ಭಾರತ ಪ್ರಜೆಗಳಾಗಿ ಹೊರಹೊಮ್ಮಬೇಕು ಎಂದರು.

ಬಾಕ್ಸ್: ಸಿದ್ದಗಂಗಾ ಮಠದ ಡಾ.ಶಿವಕುಮಾರ ಸ್ವಾಮೀಜಿ ಅವರು ಜಾತಿ,ಧರ್ಮಗಳನ್ನು ಮೀರಿ ನಿಸ್ವಾರ್ಥ ಸೇವೆ ಮಾಡಿ ಲಕ್ಷಾಂತರ ಜನರ ಬಾಳಿಗೆ ಬೆಳಕಾಗಿ ನಡೆದಾಡುವ ದೇವರಾದರು ಅವರು ಹುಟ್ಟಿದ ಊರಿನಲ್ಲಿ ದೇವಾಲಯ ನಿರ್ಮಿಸಿ ಗ್ರಾಮಕ್ಕೆ ಹೊಸ ರೂಪ ತಂದಿರುವುದು ಸಂತೋಷವಾಗಿದೆ ಇಂಥಹ ಧಾರ್ಮಿಕ ಕಾರ್ಯಗಳು ನಿರಂತರವಾಗಿ ನಡೆಯಲಿ ಎಂದು ಹಾರೈಸಿದರು.

ಬೆಟ್ಟಹಳ್ಳಿ ಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಮನಸ್ಸಿಗೆ ಒಳ್ಳೆಯ



ಸಂಸ್ಕಾರ ನೀಡಿದರೆ ಮಾತ್ರ ಬದುಕಿನಲ್ಲಿ ಮುಕ್ತಿ ಹೊಂದಲು ಸಾಧ್ಯ. ಸುನಾಮಿಯನ್ನಾದರೂ ತಡೆಯ ಬಹುದು ಆದರೆ ಮನಸ್ಸಿನ ಓಟವನ್ನು ಅಷ್ಟು ಸುಲಭವಾಗಿ ಹಿಡಿಯಲಾಗುವುದಿಲ್ಲ. ಆದರೆ ಮನಸ್ಸಿಗೆ ಉತ್ತಮ ಸಂಸ್ಕಾರ ನೀಡಿ ಕಠಿಣ ತಪ್ಪಸ್ಸಿನೊಂದಿಗೆ ಹತೋಟಿ ಮಾಡಿದ್ದಲ್ಲಿ ಬದುಕನ್ನು ಜೇನಿನಂತೆ ಸವಿಯ ಬಹುದು. ಇಲ್ಲವಾದಲ್ಲಿ ಬದುಕು ನೀರಿನಲ್ಲಿ ಹೋಮ ಮಾಡಿದಂತಾಗುತ್ತದೆ.ಮನುಷ್ಯನಿಗೆ ಎಷ್ಟೆ ಹಣ, ಸಂಪತ್ತು ಸಿಕ್ಕರು ಸಾಲುವುದಿಲ್ಲ ಎಲ್ಲವೂ ನನ್ನದೇ ನನಗೇ ಬೇಕು ಎನ್ನುವಂತಹ ದುರಾಸೆಯ ಪ್ರಾಣಿಯಾಗಿದ್ದಾನೆ. ಇದರಿಂದ ಮುಕ್ತಿ ಎಂದಿಗೂ ಸಿಗುವುದಿಲ್ಲ. ಸಂಸ್ಕಾರ ಕಲಿತು ದರ್ಮ ಕಾರ್ಯದಲ್ಲಿ ತೊಡಗಿದರೆ ಸಾಕು ದೇವರ ದರ್ಶನದ ಜತೆಗೆ ಅವನ ಪಾದದಡಿ ಮುಕ್ತಿಗೆ ಅವಕಾಶ ದೊರೆಯಲಿದೆ ಎಂದರು.

ಶಾಸಕ ಎಚ್.ಸಿ.ಬಾಲಕೃಷ್ಣ ಮಾತನಾಡಿ, ವೀರಾಪುರ ಗ್ರಾಮದ ಬಳಿ ನಿರ್ಮಾಣವಾಗುತ್ತಿರುವ 111 ಅಡಿ ಎತ್ತರದ ಸಿದ್ದಗಂಗಾ ಮಠದ ಲಿಂಗೈಕ್ಯ ಡಾ.ಶಿವಕುಮಾರಸ್ವಾಮೀಜಿ ಅವರ ಪ್ರತಿಮೆ ಕಾಮಗಾರಿ ನಡೆಯುತ್ತಿದ್ದು ಶೀಘ್ರವೇ ಪೂರ್ಣಗೊಳಿಸಿ ಲೋಕಾರ್ಪಣೆಗೊಳಿಸುವ ಕೆಲಸ ಮಾಡಲಾಗುವುದು. ಈ ಗ್ರಾಮದ ಅಭಿವೃದ್ದಿ ಬಗ್ಗೆ ನನಗೆ ಹೆಚ್ಚು ಅಸಕ್ತಿ ನನಗಿದೆ. ವೀರಾಪುರ ಗ್ರಾಮವನ್ನು ವಿಶ್ವಮಟ್ಟಕ್ಕೆ ಕೊಂಡೊಯ್ಯುವ ಕೆಲಸ ಮಾಡಲಾಗುವುದು ಎಂದರು.

ರಾಜ್ಯದ ಯಾವುದೇ ತಾಲೂಕಿನಲ್ಲಿ ಇಲ್ಲದಷ್ಟು ದೇವಾಲಯಗಳು ನಮ್ಮ ತಾಲೂಕಿನಲ್ಲಿ ಇರುವುದರಿಂದ ನಾವೆಲ್ಲರೂ ನೆಮ್ಮದಿಯಿಂದ ಬದುಕುತಿದ್ದೇವೆ. ನಾವು ಮಾಡುವ ಸೇವೆಗಳು ನಿಸ್ವಾರ್ಥತೆಯಿಂದ ಕೂಡಿ ಸಮಾಜ ಮುಖಿ ಚಿಂತನೆ ಉಳ್ಳ ವ್ಯಕ್ತಿತ್ವ ತಮದಾದರೆ ನಮ್ಮನ್ನು ದೇವರು ಕೈಹಿಡಿದು ಮುನ್ನಡೆಸುತ್ತಾನೆ ಎಂದರು.

ನೆಲಮಂಗಲ ಶಾಸಕ ಎನ್. ಶ್ರೀನಿವಾಸ್ ಮಾತನಾಡಿ, ಸುಂದರ ಪ್ರಶಾಂತವಾದ ವಾತಾವರಣದಲ್ಲಿ ದೇವಾಲಯ ನಿರ್ಮಿಸಿ ಈ ಭಾಗದ ಜನರ ನೆಮ್ಮದಿಗೆ ಅನುಕೂಲ ಕಲ್ಪಿಸಿರುವುದು ಉತ್ತಮ ಬೆಳವಣಿಗೆ. ಅರಸನಕುಂಟೆ ಗ್ರಾಮದಿಂದ ವೀರಾಪುರದ ವರೆಗೆ 3,15 ಕೋಟಿರೂ ವೆಚ್ಚದಲ್ಲಿ ರಸ್ತೆ ಅಭಿವೃದ್ದಿಮಾಡಲಾಗುತ್ತಿದೆ. ಈ ಗ್ರಾಮದ ಸರ್ವತೋಮುಖ ಅಭಿವೃದ್ದಿಗೆ ಬದ್ದನಾಗಿದ್ದೇನೆ ಎಂದರು.

ಗದ್ದುಗೆ ಮಠದ ಮಹಂತಸ್ವಾಮೀಜಿ, ಚಿಕ್ಕಮಸ್ಕಲ್ ಬಸವಲಿಂಗ ಸ್ವಾಮೀಜಿ,ಪವಾಡ ಬಸವಣ್ಣ ದೇವರ ಮಠದ ಸಿದ್ದಲಿಂಗಸ್ವಾಮೀಜಿ,ಮಾಕನಹಳ್ಳಿ ಮಠದ ಗಂಗಾಧರ ಸ್ವಾಮೀಜಿ, ಕಂಚುಗಲ್ಲು ಬಂಡೇಮಠದ ಮಹಾಲಿಂಗಸ್ವಾಮೀಜಿ, ಕಂಬಾಳು ಮಠದ ಚನ್ನವೀರ ಸ್ವಾಮೀಜಿ, ದೊಡ್ಡ ಮಠದ ಶಿವಬಸವ ಸ್ವಾಮೀಜಿ, ಶಾಸಕರಾದ ಎಸ್.ಆರ್.ವಿಶ್ವನಾಥ್, ಮಾಜಿ ಸಚಿವ ಎಚ್.ಎಂ.ರೇವಣ್ಣ, ಬಿಜೆಪಿ ಅಧ್ಯಕ್ಷ ವೀರಭದ್ರಪ್ಪ, ಟಿಎಪಿಸಿಎಂಎಸ್ ಅಧ್ಯಕ್ಷ ಶಿವಪ್ರಸಾದ್, ನಾಗರುದ್ರ ಶರ್ಮ, ಮೋಹನ್ ಕುಮಾರು, ಗುರುದೇವ್, ಮಹಂತೇಶಯ್ಯ, ಜಿ.ಎಸ್.ವೀರಭದ್ರ ಸ್ವಾಮಿ, ಮರುಳ ಸಿದ್ದಯ್ಯ, ನಂದನ್, ರೇಣುಕಾರಾಧ್ಯ, ದುಶ್ಯಂತ್, ಲೋಕೇಶ್, ವಿ.ವಿ.ಧನುಷ್ ಇತರರು ಇದ್ದರು.

# ಹಾರ್ಟ್ ಆಫ್ ಲೀವಿಂಗ್ ಸಂಸ್ಥೆಯ ಕಾರ್ಯ ಶ್ಲಾಘನೀಯ

**ಮಾಲೂರು:** ಬರಪೀಡಿತ ಪ್ರದೇಶದಲ್ಲಿ ಅಂತರ್ಜಲ ವೃದ್ಧಿಸಲು ಸರ್ಕಾರದ ಅನುದಾನಕ್ಕೆ ಕಾಯದೆ ಸಿ ಎಸ್ ಆರ್ ಅನುದಾನವನ್ನು ಬಳಸಿ ಕೆರೆಗಳ ಪುನಶ್ಚೇತನ ಮತ್ತು ಅಂತರ್ಜಲ ವೃದ್ಧಿಗೆ ದಿ ಹಾರ್ಟ್ ಆಫ್ ಲೀವಿಂಗ್ ಸಂಸ್ಥೆ ಕಾರ್ಯನಿರ್ವಹಿಸುತ್ತಿರುವುದು ಶ್ಲಾಘನೀಯ ಎಂದು ಸಿಇಓ ಪ್ರವೀಣ್ ಪಿ ಬಾಗೇವಾಡಿ ಹೇಳಿದರು,

ತಾಲ್ಲೂಕಿನ ಮಡಿವಾಳ ಗ್ರಾ.ಪಂ.ವ್ಯಾಪ್ತಿಯ ಯಶವಂತಪುರ ಗ್ರಾಮದಲ್ಲಿ ದಿ ಹಾರ್ಟ್ ಆಫ್ ಲೀವಿಂಗ್ ಸಂಸ್ಥೆ ಹಾಗೂ ಐಟಿಸಿ ಲಿಮಿಟೆಡ್ ಕಂಪೆನಿ ಸಹಯೋಗದಲ್ಲಿ 50 ಲಕ್ಷ ರೂ ವೆಚ್ಚದಲ್ಲಿ ದಕ್ಷಿಣ ಪೆನ್ನಾರ್ ನದಿ ಪುನಶ್ಚೇತನ ಹಾಗೂ ಅಂತರ್ಜಲ ಅಭಿವೃದ್ಧಿ ಕಾರ್ಯಯೋಜನೆಯ ಕಾಮಗಾರಿಗೆ ಕೋಲಾರ ಜಿಲ್ಲೆ ಸಿಇಓ ಪ್ರವೀಣ್ ಪಿ ಬಾಗೇವಾಡಿ ದಿ ಹಾರ್ಟ್ ಆಫ್ ಲೀವಿಂಗ್ ಸಂಸ್ಥೆ ನಿರ್ದೇಶಕ ನಾಗರಾಜ್ ಗಂಗೋಲಿ ಗುದ್ದಲಿ ಪೂಜೆ ನೆರವೇರಿಸಿದರು,

ಕೋಲಾರ ಜಿಲ್ಲೆ ಬರಪೀಡಿತ ಪ್ರದೇಶ ವಾಗಿದ್ದು ಅಂತರ್ಜಲ ಹೆಚ್ಚಿಸಲು ಸರ್ಕಾರದ ಅನುದಾನಕ್ಕೆ ಕಾಯುವ ಬದಲು ಸಿ ಎಸ್ ಆರ್ ಅನುದಾನವನ್ನು ಬಳಸಿ ಸರ್ಕಾರದ ಕೈ ಜೋಡಿಸಿದಾಗ ಗ್ರಾಮಗಳನ್ನು ಒಳಗೊಂಡಂತೆ ಕುಡಿಯುವ ನೀರು ಮತ್ತು ಕೃಷಿ ಚಟುವಟಿಕೆಗಳಿಗೆ ಈ ಕಾರ್ಯಕ್ರಮ ಅನುಷ್ಠಾನ ಗೊಳಿಸಬಹುದು,





ಅಲ್ಲದೇ ಮಾಲೂರು ತಾಲ್ಲೂಕಿನಲ್ಲಿ ನೀರಿನ ಅಭಾವವಿರುವ 52 ಗ್ರಾಮಗಳನ್ನು ಗುರುತಿಸಿ ಸರ್ಕಾರದಿಂದ ಮತ್ತು ಜಿಲ್ಲಾ ಪಂಚಾಯಿತ್ ತಾ.ಪಂ.ವತಿಯಿಂದ ಮುಂದಿನ ಕ್ರಮಗಳನ್ನು ಕೈಗೊಂಡು ಬರುವ ಬೇಸಿಗೆಗೆ ನೀರಿನ ಅಭಾವ ಉಂಟಾಗದಂತೆ ಎಚ್ಚರ ವಹಿಸುತ್ತಿದ್ದೇವೆ, ಇನ್ನೂ ದಿ ಹಾರ್ಟ್ ಆಫ್ ಲೀವಿಂಗ್ ಸಂಸ್ಥೆಯವರು ಒಳ್ಳೆಯ ಕೆಲಸ ಮಾಡುತ್ತಿದ್ದು, ಕೋಲಾರ ಜಿಲ್ಲೆ ಅಲ್ಲದೆ ಬೇರೆ ಜಿಲ್ಲೆಗಳಲ್ಲಿ ಸಿ ಎಸ್ ಆರ್ ಅನುದಾನ ಮುಖಾಂತರ ಜನರಿಗೆ ಸಹಾಯಾಗುವಂತ ಕೆಲಸ ಮಾಡುತ್ತಿದ್ದಾರೆ, ಇನ್ನು ಅಂತರ್ಜಲ ಬಗ್ಗೆ ಹರಿವು ಮೂಡಿಸುತ್ತಿದ್ದು, ಈ ಸಂಸ್ಥೆಯು ಇದೇ ರೀತಿ ಕಾರ್ಯಕ್ರಮಗಳನ್ನ ಮುಂದವರಿಸಿ ಸರ್ಕಾರದ ಜೊತೆ ಕೈ ಜೋಡಿಸಿ ಸಿ ಎಸ್ ಆರ್ ಅನುದಾನದಲ್ಲಿ ಇನ್ನು ಹೆಚ್ಚಿನ ಕಾರ್ಯಕ್ರಮ ನೀಡಲಿ ಎಂದು ಹೇಳಿದರು,

ಈ ಸಂದರ್ಭದಲ್ಲಿ ತಾ.ಪಂ.ಇಓ ವಿ.ಕೃಷ್ಣಪ್ಪ, ಐಟಿಸಿ ಕಂಪನಿಯ ಪ್ರಧಾನ ವ್ಯವಸ್ಥಾಪಕ ಮುತ್ತು ಕೃಷ್ಣ ಮೂರ್ತಿ, ದಿ ಹಾರ್ಟ್ ಆಫ್ ಲೀವಿಂಗ್ ನಿರ್ದೇಶಕ ನಾಗರಾಜ್ ಗಂಗೋಲಿ, ಐಟಿಸಿ ಕಂಪನಿಯ ಪ್ರಿಯಾಂಕಾ, ಪಿಡಿಓ ಕಾಶೀನಾಥ್, ಗ್ರಾ.ಪಂ.ಅಧ್ಯಕ್ಷೆ ಪದ್ಮಾ ಸುರೇಶ್, ಉಪಾಧ್ಯಕ್ಷೆ ಲಾವಣ್ಯ ರಾಘವೇಂದ್ರ, ದಿ ಲಿವಿಂಗ್ ಹಾರ್ಟ್ ಜಿಲ್ಲಾ ಸಂಯೋಜಕ ನೀಲಕಂಠಪುರ ಆರ್.ಕುಮಾರ್, ತಾಲ್ಲೂಕು ಸಂಯೋಜಕ ಬಹುಗುಣ, ವಿನಾಯಕ, ಸದಸ್ಯರು ಅಜ್ಮಲ್ ಖಾನ್, ದಯಾನಂದ, ಕಾರ್ಯದರ್ಶಿ ಅಂಬರೀಶ್, ಬಿಲ್ ಕಲೆಕ್ಟರ್ ಲೋಕೇಶ್, ಮುಖಂಡರಾದ ಎಂ.ರಾಮು, ಟಿ.ಮುನಿರಾಜುಗೌಡ, ವೈ.ಸಿ.ಉಮೇಶ್, ವೈ.ಟಿ.. ನಾರಾಯಣಸ್ವಾಮಿ, ಎ.ರವಿಕುಮಾರ್, ಆರ್. ಮಂಜುನಾಥ್, ಸೂರಪ್ಪ , ಎಂ.ಜಯರಾಜ್, ಗ್ರಾ.ಪಂ.ಸಂಯೋಜಕರು ಸೇರಿದಂತೆ ಗ್ರಾಮದ ಮುಖಂಡರು ಹಾಜರಿದ್ದರು.

# ವಿರೋಧ ಪಕ್ಷದವರು ಕೇವಲ ಟೀಕೆ, ಟಿಪ್ಪಣಿಗೆ ಸೀಮಿತ

**ಮಾಲೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿರುವ ಬಜೆಟ್‌ನಲ್ಲಿ ಕೋಲಾರ ಜಿಲ್ಲೆಗೆ 8 ಯೋಜನೆಗಳನ್ನು ನೀಡಿದ್ದು, ಜಿಲ್ಲೆಯ ಶಾಸಕರುಗಳ ಒತ್ತಾಯದ ಮೇರೆಗೆ ಕೋಲಾರಕ್ಕೆ ಖಾಸಗಿ ಸಹಭಾಗಿತ್ವದ ಮೆಡಿಕಲ್ ಕಾಲೇಜು ನೀಡುವುದರೊಂದಿಗೆ ಮಾಲೂರು ತಾಲ್ಲೂಕಿನ ಅಭಿವೃದ್ಧಿಗೆ ವಿಶೇಶ ಅನುದಾನ ನೀಡಿರುವುದು ಶ್ಲಾಘನೀಯ ಎಂದು ಶಾಸಕ ಕೆ.ವೈ.ನಂಜೇಗೌಡ ತಿಳಿಸಿದ್ದಾರೆ.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಕಾಂಗ್ರೆಸ್ ಮುಖಂಡರುಗಳೊಂದಿಗೆ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದರು

ಮಾಲೂರು ನಗರದಲ್ಲಿ ಹಾಸ್ಪಿಟಲ್‌ನವೀಕರಣಕ್ಕೆ ಈಗಾಗಲೇ 40 ಕೋಟಿ ಘೋಷಣೆ ಮಾಡಿದ್ದು ಇನ್ನೂ ಹೆಚ್ಚುವರಿ 10 ಕೋಟಿ ಸೇರಿ 50 ಕೋಟಿ ನೀಡಲು ಆರೋಗ್ಯ ಸಚಿವರು ಆಶ್ವಾಸನೆ ನೀಡಿದ್ದಾರೆ.ಶಿವಾರಪಟ್ಟಣದಲ್ಲಿ ಕೈಗಾರಿಕಾ ಪಾರ್ಕ್ ಹಾಗೂ ದೇವನಹಳ್ಳಿಯಿಂದ ಮಾಲೂರು ಮೂಲಕ ತಮಿಳುನಾಡಿನ ಗಡಿವರೆಗೆ ಹಾಗೂ ವೇಮಗಲ್ ನಿಂದ ಕೋಲಾರದವರೆಗೆ ಕೈಗಾರಿಕಾ ಸಂಪರ್ಕ ಕಲ್ಪಿಸುವ 123 ಕಿ.ಮೀಗಳ ನಾಲ್ಕು ಪಥಗಳ ರಸ್ತೆ ನಿರ್ಮಾಣಕ್ಕೆ 3109 ಕೋಟಿ ಅನುದಾನ ನೀಡಿರುವುದರಿಂದ ಮಾಲೂರು ನಗರ ಸಮಗ್ರ ಅಭಿವೃದ್ಧಿಗೆ ಹಾಗೂ ಆರ್ಥಿಕವಾಗಿ ಮುಂದುವರೆಯಲು ಬಜೆಟ್ ಪೂರವಾಗಿದೆ. ಇದೇ ಅಲ್ಲದೆ ಕೆಜಿಎಫ್ ಹೈಟೆಕ್ ಮಾರುಕಟ್ಟೆ, ಉದ್ಯೋಗಸ್ಥ ಮಹಿಳೆಯರಿಗೆ ನರಸಾಪುರದಲ್ಲಿ 173 ಕೋಟಿರೂಗಳ ವೆಚ್ಚದಲ್ಲಿ 6000 ಸಾಮರ್ಥ್ಯದ ಮಹಿಳಾ ವಸತಿ ನಿಲಯ ನಿರ್ಮಾಣ, ಕೆ.ಜಿ.ಎಫ್



ಬಳಿ ಭಾರತೀಯ ಮೀಸಲು ಪೊಲೀಸ್ ಪಡೆ ಸ್ಥಾಪಿಸಲು 40 ಕೋಟಿ ಅನುದಾನ,ಕೋಲಾರದಲ್ಲಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಸ್ಥಾಪನೆ ಮಾಡುವ ಮೂಲಕ ಜಿಲ್ಲೆಯ ಅಭಿವೃದ್ಧಿಗೆ ಸಹಕಾರ ನೀಡಿದ್ದಾರೆಂದು ವಿವರಿಸಿದರು.

ಜಿಲ್ಲೆಗೆ ಹಲವು ಯೋಜನೆಗಳನ್ನು ನೀಡುವ ಮೂಲಕ ಬಂಪರ್ ಕೊಡುಗೆ ನೀಡಿದ್ದು ,ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಹಾಗೂ ಸಹಕಾರ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಸುರೇಶ್ ರವರಿಗೆ ಆರೋಗ್ಯ ಮಂತ್ರಿ ದಿನೇಶ್ ಗುಂಡೂರಾವ್ ರವರಿಗೆ ಮಾಲೂರು ಜನತೆ ಪರವಾಗಿ ಧನ್ಯವಾದಗಳು ತಿಳಿಸಿದರು.

ಈಗಾಗಲೇ ಮಾಲೂರು ದೊಡ್ಡ ಕೆರೆ ಅಭಿವೃದ್ಧಿ, ಬಸ್ ನಿಲ್ದಾಣ ನವೀಕರಣಕ್ಕೆ ಅನುದಾನ,ಮಾಸ್ತಿ ಬಸ್ ನಿಲ್ದಾಣ ನವೀಕರಣ ಮಾಡಿದ್ದು,ತಾಲ್ಲೂಕಿನ ರಸ್ತೆಗಳ ಅಭಿವೃದ್ಧಿಗೆ ಹಚ್ಚಿನ ಅನುದಾನ ಸರ್ಕಾರ ನೀಡಿರುವುದನ್ನು ನೆನಪಿಸಿದರು.

ವಿರೋಧ ಪಕ್ಷದವರು ಕೇವಲ ಟೀಕೆಗೆಸೀಮಿತವಾಗಿದ್ದು,ಕಳೆದ ಬಿ.ಜೆ.ಪಿ ಸರ್ಕಾರ ಮಂಡಿಸಿರುವ ಬಜೆಟ್ ಗಳಲ್ಲಿ ಕೋಲಾರ ಜಿಲ್ಲೆಗೆ, ಮಾಲೂರು ತಾಲ್ಲೂಕಿಗೆ ಎಷ್ಟು ಎಷ್ಟು ಅನುದಾನ, ವಿಶೇಷ ಕಾರ್ಯಕ್ರಮ ನೀಡಿದ್ದಾರೆ ಎಂಬುದರ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಬೇಕು ಎಂದು ಮನವಿ ಮಾಡಿದರು. ಜಿಲ್ಲೆಯಸಮಗ್ರ ಅಭಿವೃದ್ಧಿಯ ಬಜೆಟ್ ಇದಾಗಿದ್ದು,ಜನಪರವಾಗಿದೆ. ಕೃಷಿ, ನೀರಾವರಿ, ಗ್ರಾಮೀಣ ಅಭಿವೃದ್ಧಿ, ಮೂಲಸೌಕರ್ಯ, ಸಮಾಜ ಕಲ್ಯಾಣಶಿಕ್ಷಣ, ಆರೋಗ್ಯ, ಉದ್ಯೋಗ ಸೃಷ್ಠಿ ರೈತರಿಗೆ ಸಹಕಾರಿಬಟೆಟ್, ಪಂಚ ಗ್ಯಾರಂಟಿಗಳ ಜೊತೆಗೆ ಆರ್ಥಿಕ ಸಮತೋಲನ ಕಾಳಜಿಯೊಂದಿಗೆ ಸರ್ವ ಸ್ಪರ್ಶಿ ಹಾಗೂ ಸಮಾನತೆಯನ್ನು ಸಾಧಿಸಿದ್ದಾರೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಮಾಜಿ ಶಾಸಕ ಎ.ನಾಗರಾಜ್, ಜಿಲ್ಲಾ ಕಾಂಗ್ರೆಸ್‌ಅಧ್ಯಕ್ಷ ಸಿ.ಲಕ್ಷೀನಾರಾಯಣ್, ದರಖಾಸ್ತು ಸಮಿತಿ ಅಧ್ಯಕ್ಷರಾದ ಎಚ್.ಹನುಮಂತಪ್ಪ,ಸಂತೇಹಳ್ಳಿ ನಾರಾಯಣಸ್ವಾಮಿ, ಪುರಸಭಾ ಅಧ್ಯಕ್ಷೆಕೋಮಲ, ಸ್ಥಾಯಿ ಸಮಿತಿ ಅಧ್ಯಕ್ಷ ಎ.ರಾಜಪ್ಪ, ಸದಸ್ಯ ಬುಲೆಟ್ ವೆಂಕಟೇಶ್, ಕಾಂಗ್ರೆಸ್ ಅಧ್ಯಕ್ಷ ಎಂ.ಎಂ. ತನ್ವೀರ್, ಮುಖಂಡರಾದ ಎಂ.ವಿ.ಹನುಮಂತಪ್ಪ, ದ್ಯಾಪಸಂದ್ರ ನಾರಾಯಣಗೌಡ, ಜೆ.ಎಂ.ಸುರೇಶ್, ಎನ್.ವಿ.ಈಶ್ವರ್, ಜಯರಾಮ್ ಮುಂತಾದವರಿದ್ದರು.

# ಯುವಕ ಯುವತಿಯರಿಗೆ ತರಬೇತಿ


**ಮಾಲೂರು:**3ನೇ ವರ್ಷದ ಸಮಾವೇಶ ಮಾಲೂರಿನಲ್ಲಿ ಅಯೋಜನೆ ಮಾಡುವ ಮೂಲಕ ಅಪ್ಪು ನಮ್ಮ ಕರ್ನಾಟಕ ಸೇನೆ ಟ್ರಸ್ಟ್ ಹೆಸರಿನಲ್ಲಿ ಪ್ರಾರಂಭಿಸಿ ಇಲ್ಲಿನ ನಿರುದ್ಯೋಗ ಯುವಕ ಯುವತಿಯರಿಗೆ ತರಬೇತಿ ನೀಡುವ ಕನಸಾಗಿದೆ ಎಂದು ರಾಜ್ಯಾಧ್ಯಕ್ಷ ಬಸವರಾಜ್ ಪಡುಕೋಟೆ ಹೇಳಿದ್ದಾರೆ.

ಪಟ್ಟಣದ ಕನ್ನಡ ಸಾಹಿತ್ಯ ಪರಿಷತ್ತಿನ ಕಚೇರಿಯಲ್ಲಿ ರಾಜ್ಯ ಪ್ರದಾನ ಕಾರ್ಯದರ್ಶಿ ಚಾಕನಹಳ್ಳಿ ನಾಗರಾಜ್ ನೇತೃತ್ವದಲ್ಲಿ ನೂರಾರು ಯುವ ಸಮೂಹ ತಂಡವು ಅಪಾರ ಸಂಖ್ಯೆಯಲ್ಲಿ ಸೇರ್ಪಡೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಹೊರ ದೇಶಗಳಿಂದ ಅಗಮಿಸಿ ವಿವಿಧ ಕಂಪನಿಗಳ ಸ್ಥಾಪನೆಗೆ ಬಡ ರೈತರ ಭೂಮಿಯನ್ನು ಕಡಿಮೆ ಬೆಲೆಗೆ ಖರೀದಿಸುವುದಲ್ಲದೇ ಅವರ ಕುಟುಂಬದ ಸದಸ್ಯರಿಗೆ ಉದ್ಯೋಗ ನೀಡುತ್ತಿಲ್ಲ, ಜತೆಗೆ 60 ರಷ್ಟು ಕನ್ನಡಿಗರಿಗೆ ಉದ್ಯೋಗ ನೀಡುತ್ತಿಲ್ಲ. ನಮ್ಮ ಭೂಮಿ, ನಮ್ಮ ನೀರು, ನಮ್ಮ ವಿದ್ಯುತ್ ಪಡೆದು ವಂಚನೆ ಮಾಡುತ್ತಿರುವ ಕಂಪನಿಗಳ ವಿರುದ್ಧ ಮುಂದಿನ ದಿನಗಳಲ್ಲಿ ಹೋರಾಟ ಮಾಡಲು ತೀರ್ಮಾನಿಸಿದ್ದು, ಕೋಲಾರ ಜಿಲ್ಲೆ ಹೋರಾಟಗಳ ಹುಟ್ಟೂರಾಗಿದ್ದು, ಜಿಲ್ಲೆಯ ಮೇಲೆ ಅಪಾರ ನಂಬಿಕೆ, ವಿಶ್ವಾಸ, ಪ್ರೀತಿ ಇದೆ. ಅದ್ದರಿಂದ ಮಾಲೂರಿನಲ್ಲಿ ಮುಂದಿನ 3ನೇ ವರ್ಷದ ಸಮಾವೇಶದಲ್ಲಿ ಅಪ್ಪು ನಮ್ಮ ಕರ್ನಾಟಕ ಸೇನೆ ಟ್ರಸ್ಟ್ ಪ್ರಾರಂಭಿಸಿ 1 ಎಕರೆ ಭೂಮಿಯನ್ನು ಖರೀದಿಸಿ ಟ್ರಸ್ಟ್ ಮೂಲಕ ನಿರುದ್ಯೋಗ ಯುವ, ಯುವತಿಯರಿಗೆ ಸೇನೆ, ಚಲನಚಿತ್ರ, ಮಾಧ್ಯಮ, ಪೋಲಿಸ್ ತರಬೇತಿ ಅಕಾಡೆಮಿ ಪ್ರಾರಂಭಿಸಲು ಸಂಘಟನೆಯ ಕನಸಾಗಿದೆ. ಇತ್ತಿಚೀನ ದಿನಗಳಲ್ಲಿ ಯುವ ಸಮೂಹ, ವಿದ್ಯಾರ್ಥಿಗಳು ಕೆಟ್ಟ ಚಟ್ಟಗಳಿಗೆ ಬಲಿಯಾಗುತಿದ್ದು, ಯುವ ಘಟಕ ಪದಾಧಿಕಾರಿಗಳು ಅಂತರವನ್ನು ಸಂಘಟನೆಗೆ ಸೇರಿಸುವ ಮೂಲಕ ಸರಿದಾರಿಗೆ ತರುವಮೂಲಕ ಸಂಘಟನೆಯನ್ನು ಬಲಪಡಿಸುವಂತೆ ತಿಳಿಸಿದರು.

ರಾಜ್ಯ ಪ್ರಧಾನ ಕಾರ್ಯದರ್ಶಿ ಚಾಕನಹಳ್ಳಿ ನಾಗರಾಜ್ ಮಾತನಾಡಿ,. ನಮ್ಮ ಕರ್ನಾಟಕ ಸೇನೆ ರಾಜ್ಯ, ಜಿಲ್ಲೆ ಹಾಗೂ ತಾಲ್ಲೂಕಿನಲ್ಲಿ ಬಲಿಷ್ಠ ವಾಗಿದೆ. ನಮ್ಮ ಸಂಘಟನೆ ಶಿಸ್ತಿನ ಸಂಘಟನೆ, ನಮ್ಮ ಕರ್ನಾಟಕ ಸೇನೆಯ ಕಾರ್ಯವೈಖರಿ, ಹೋರಾಟ, ಪ್ರತಿಭಟನೆಗಳನ್ನು ರಾಜಕಾರಣಿಗಳು, ಅಧಿಕಾರಿಗಳು ಗಮನಹರಿಸುತ್ತಿದ್ದಾರೆ. ನೂತನವಾಗಿ ಜಿಲ್ಲಾ ಯುವ ಘಟಕ ಅಧ್ಯಕ್ಷರಾಗಿ, ಸೇರ್ಪಡೆ ಯಾಗುತ್ತಿರುವ ಕಾರ್ಯಕರ್ತರು ನೆಲ.ಜಲ. ಭಾಷ, ಕನ್ನಡಿಗರಿಗೆ ಯಾವುದೇ ತೊಂದರೆಯಾದಲ್ಲಿ ಹೋರಾಟಕ್ಕೆ ಕೈ ಜೋಡಿಸಿ, ಸಂಘಟನೆ ಬಲಷ್ಠವಾಗಿ ಸಂಘಟಿಸುವಂತೆ ಕರೆ ನೀಡಿದರು. ಜಿಲ್ಲಾ ಯುವ ಘಟಕ ಅಧ್ಯಕ್ಷರಾಗಿ ವಿಐಪಿ ಮಂಜುನಾಥ್ ಆಯ್ಕೆಮಾಡಲಾಯಿತು ಇದೇ ಸಮಯದಲ್ಲಿ , ಮಂಜುನಾಥ್ ನೇತೃತ್ವದಲ್ಲಿ ಶಂಕರ್, ಕಬ್ಬಡಿ ಶಿವು,ಸಲ್ಮಾನ್ ಖಾನ್, ಅಯ್ಯಾರ್ ರಮೇಶ್, ಕಾಟೇರಿ ಅಂಬರೀಶ್, ಅಶೋಕ್ ರೆಡ್ಡಿ, ಚನ್ನಕಲ್ ಕಾಂತರಾಜ್, ಹೆಡಗಿನಬೆಲೆ ಸುರೇಶ್ ಸೇರಿದಂತೆ ಅಪಾರ ಯುವಕರು ಸೇರ್ಪಡೆ ಯಾದರು.

ಈ ಸಂದರ್ಭದಲ್ಲಿ ರಾಜ್ಯ ಉಪಾಧ್ಯಕ್ಷ ಆಟೋ ಶ್ರೀನಿವಾಸ್, ಯುವ ಘಟಕ ಕಾರ್ಯದರ್ಶಿ ಹರ್ಷವರ್ಧನ್, ಜಿಲ್ಲಾ ಉಸ್ತುವಾರಿ ಎಸ್. ಎಂ.ರಾಜು, ಜಿಲ್ಲಾಧ್ಯಕ್ಷ ಅವಿನಾಶ್, ಕುಮಾರಿ, ಗೌರವಾಧ್ಯಕ್ಷ ಎಂ.ವಿ.ಶ್ರೀನಿವಾಸ್, ತಾಲ್ಲೂಕು ಅಧ್ಯಕ್ಷ ಮಾದನಹಟ್ಟಿ ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಕೆ.ಎನ್.ಜಗದೀಶ್, ಆಂಜಿಕನ್ನಡಿಗ, ಮಹಿಳಾ ಅಧ್ಯಕ್ಷೆ ಮುನಿರತ್ನಮ್ಮ, ಮಂಜುನಾಥ್ ಗೌಡ, ದಸ್ತಗಿರಿ, ಕೋಡೂರು ಮಂಜುನಾಥ್, ಶ್ರೀನಾಥ್ ಸೇರಿದಂತೆ ಹಲವಾರು ಕಾರ್ಯಕರ್ತರು ಹಾಜರಿದ್ದರು.



# ಜಗತ್ತಿನ ಅತ್ಯಂತ ವಾಯುಮಾಲಿನ್ಯ ನಗರ ಅಸ್ಸಾಂನ ಬೈರ್ನಿಹತ್‌ಗೆ ಅಗ್ರಸ್ಥಾನ

**ನವದೆಹಲಿ:** ಜಗತ್ತಿನಲ್ಲಿ ಅತಿ ಹೆಚ್ಚು ವಾಯುಮಾಲಿನ್ಯ ಹೊಂದಿರುವ ನಗರಗಳ ಪಟ್ಟಿಯಲ್ಲಿ ಮೊದಲ 20 ಸ್ಥಾನಗಳಲ್ಲಿ ಭಾರತದ 13 ಸ್ಥಳಗಳಿವೆ. ಅದರಲ್ಲೂ ಅಸ್ಸಾಂನ ಬೈರ್ನಿಹತ್ ಅಗ್ರಸ್ಥಾನ ಪಡೆದಿದೆ ಎಂದು ಮಂಗಳವಾರ ಬಿಡುಗಡೆಯಾದ ವರದಿಯೊಂದು ತಿಳಿಸಿದೆ.

ಸ್ವಿಸ್ ಕಂಪನಿ ಐಕ್ಯೂಏರ್ ವಿಶ್ವ ವಾಯು ಗುಣಮಟ್ಟ ವರದಿ–2024ನ್ನು ಬಿಡುಗಡೆ ಮಾಡಿದೆ.

ವಿಶ್ವದಲ್ಲೇ ಅತಿ ಮಾಲಿನ್ಯ ರಾಜಧಾನಿಗಳ ಪಟ್ಟಿಯಲ್ಲಿ ದೆಹಲಿ ಇದೆ. 2023ರಲ್ಲಿ ಜಗತ್ತಿನಲ್ಲಿ ವಾಯುಮಲಿನ್ಯ ದೇಶಗಳ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದ್ದ ಭಾರತ, 2024ರಲ್ಲಿ ಐದನೇ ಸ್ಥಾನಕ್ಕೆ ಇಳಿದಿದೆ.

ಭಾರತದಲ್ಲಿ ವಾಯುಮಾಲಿನ್ಯ ಮಟ್ಟ ಕ್ಯೂಬಿಕ್ ಮೀಟರ್‌ಗೆ ಹೋಲಿಸಿದರೆ 2024ರಲ್ಲಿ 7ರಿಂದ ಪಿಎಂ2.7ಗೆ ಇಳಿಕೆ ಕಂಡಿದೆ. ಆದರೂ, ವಿಶ್ವದ ಟಾಪ್ 10 ಮಲಿನ ನಗರದಲ್ಲಿ ಭಾರತ ಆರನೇ ಸ್ಥಾನದಲ್ಲಿದೆ. ದೆಹಲಿ ನಿರಂತರವಾಗಿ ಹೆಚ್ಚು ಮಾಲಿನ್ಯ ಹೊಂದಿರುವ ಸ್ಥಳವಾಗಿ ದಾಖಲೆ ಬರೆದಿದ್ದು, ವಾಯುಗುಣಮಟ್ಟದ ಕ್ಯೂಬಿಕ್ ಮೀಟರ್‌ನ ಮೈಕ್ರೋಗ್ರಾಂ 91.6 ದಾಖಲಾಗಿದೆ. 2023ರಲ್ಲಿ ಇದು 92.7 ಇತ್ತು.



**ವಿಶ್ವದ ಟಾಪ್ 20 ವಾಯು ಮಾಲಿನ್ಯ ಹೊಂದಿರುವ ಪಟ್ಟಿಯಲ್ಲಿ ಸ್ಥಾನ ಪಡೆದ ಭಾರತದ 13 ಸ್ಥಳಗಳು: ಬೈರ್ನಿಹತ್, ದೆಹಲಿ, ಮುಲ್ಲನ್‌ಪುರ್ (ಪಂಜಾಬ್), ಫರೀದಾಬಾದ್, ಲೋನಿ, ನವದೆಹಲಿ, ಗುರುಗ್ರಾಮ್, ಗಂಗಾನಗರ, ಗ್ರೇಟರ್ ನೋಯ್ಡಾ, ಭಿವಾಡಿ, ಮುಜಾಫರ್ ನಗರ, ಹನುಮಾನ್‌ಗಢ, ನೋಯ್ಡಾ**

ಭಾರತದ ಶೇ.35ರಷ್ಟು ನಗರಗಳ ವಾರ್ಷಿಕ ವಾಯುಸಾಂದ್ರತೆ ಮಟ್ಟ 2.5ಕ್ಕಿಂತ 10 ಪಟ್ಟು ಜಾಸ್ತಿ ಇವೆ. ಇದು ವಿಶ್ವ ಆರೋಗ್ಯ ಸಂಸ್ಥೆಯ ಪ್ರತಿ ಕ್ಯೂಬಿಕ್ ಮೀಟರ್ 5 ಮೈಕ್ರೋಗ್ರಾಂಗಳಿಗಿಂತ ಹೆಚ್ಚು ಎಂದು ವರದಿ ಹೇಳಿದೆ.

ಭಾರತದಲ್ಲಿ ವಾಯುಮಾಲಿನ್ಯ ಗಂಭೀರ ಆರೋಗ್ಯ ಸಮಸ್ಯೆಯಾಗಿದ್ದು, ಇದುಜೀವಿತಾ ವಧಿಯನ್ನು 5.2 ವರ್ಷ ಕಡಿಮೆ ಮಾಡುತ್ತದೆ ಎಂದು ವರದಿ ಎಚ್ಚರಿಸಿದೆ. ಕಳೆದ ವರ್ಷ ಪ್ರಕಟವಾದ ಲ್ಯಾನ್ಸೆಟ್ ಪ್ಲಾನೆಟರಿ ಹೆಲ್ತ್ ಅಧ್ಯಯನದ ಪ್ರಕಾರ, 2009ರಿಂದ 2019ರವರೆಗೆ ಭಾರತದಲ್ಲಿ ದೀರ್ಘಕಾಲಿಕ ವಾಯು ಮಾಲಿನ್ಯಕ್ಕೆ ಅಂದರೆ ಪಿಎಂ2.5 ಮಾಲಿನ್ಯಕ್ಕೆ ಒಡ್ಡಿಕೊಳ್ಳುತ್ತಿರುವುದರಿಂದ ಪ್ರತಿ ವರ್ಷ ಸುಮಾರು 1.50 ಮಿಲಿಯನ್ ಸಾವು ಸಂಭವಿಸುತ್ತದೆ.

ವಾಯು ಮಾಲಿನ್ಯಕ್ಕೆ ಕಾರಣವೇನು: ಪಿಎಂ2.5 ಎಂಬುದು ವಾಯು ಮಾಲಿನ್ಯದ ಸಣ್ಣ ಕಣವಾಗಿದ್ದು, 2.5 ಮೈಕ್ರೋನ್ಸ್‌ಗಿಂತ ಕಡಿಮೆಯಾಗಿದೆ. ಇದು ನೇರವಾಗಿ ಶ್ವಾಸಕೋಶ ಮತ್ತು ರಕ್ತನಾಳಕ್ಕೆ ಸಾಗಿ ಉಸಿರಾಟ, ಹೃದಯ ರೋಗ ಮತ್ತು ಕ್ಯಾನ್ಸರ್‌ಗೆ ಕಾರಣವಾಗಬಹುದು. ಈ ಮಾಲಿನ್ಯದಲ್ಲಿ ವಾಹನದ ಹೊಗೆ, ಕೈಗಾರಿಕೆ, ಮರ ಅಥವಾ ತ್ಯಾಜ್ಯ ಸುಡುವಿಕೆಯೂ ಸೇರಿದೆ.

"ದೇಶದಲ್ಲಿ ವಾಯುಗುಣಮಟ್ಟದಲ್ಲಿ ಏರಿಕೆ ಕಾಣುತ್ತಿದ್ದರೂ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತಿಲ್ಲ" ಎಂದು ಮಾಜಿ ಡಬ್ಲ್ಯೂಎಚ್‌ಒ ಮುಖ್ಯ ವಿಜ್ಞಾನಿ ಮತ್ತು ಆರೋಗ್ಯ ಸಚಿವಾಲಯದ ಸಲಹೆಗಾರ್ತಿ ಸೌಮ್ಯ ಸ್ವಾಮಿನಾಥನ್ ತಿಳಿಸಿದ್ದಾರೆ.

# ಮಾರಿಷಸ್‌ನಲ್ಲಿ ಮೋದಿಗೆ ಅದ್ದೂರಿ ಸ್ವಾಗತ

**ನವದೆಹಲಿ:** ಪ್ರಧಾನಿ ನರೇಂದ್ರ ಮೋದಿ ಅವರು ಎರಡು ದಿನಗಳ ಭೇಟಿಗಾಗಿ ಮಾರಿಷಸ್‌ಗೆ ಬಂದಿಳಿದಿದ್ದಾರೆ. ಮಾರ್ಚ್ 12ರಂದು ನಡೆಯುವ ರಾಷ್ಟ್ರೀಯ ದಿನಾಚರಣೆಯಲ್ಲಿ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಅಲ್ಲಿನ ಪ್ರಧಾನಿ ನವೀನಚಂದ್ರ ರಾಮ್‌ಗೂಲಂ ಅವರ ಆಹ್ವಾನದ ಮೇರೆಗೆ ಮೋದಿ ಭೇಟಿ ನೀಡುತ್ತಿದ್ದಾರೆ.

ಭಾರತದ ವಿದೇಶಾಂಗ ಸಚಿವಾಲಯ ಈ ಬಗ್ಗೆ ಎಕ್ಸ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿದ್ದು, "ಪ್ರಧಾನಿ ಮೋದಿ ಅವರು 2 ದಿನಗಳ ಭೇಟಿಗೆ ಮಾರಿಷಸ್?ಗೆ ತೆರಳಿದರು. ಅಲ್ಲಿನ ಪ್ರಧಾನಿ ಮತ್ತು ಗಣ್ಯರ ಜೊತೆ ಮಾತುಕತೆ ನಡೆಸಲಿದ್ದಾರೆ. ಈ ಭೇಟಿ ಭಾರತ–ಮಾರಿಷಸ್‌ನ ಶಾಶ್ವತ ಸಂಬಂಧಗಳನ್ನು ಬಲಪಡಿಸಲಿದೆ" ಎಂದಿದೆ.

ಉಭಯ ರಾಷ್ಟ್ರಗಳ ನಡುವೆ ಹೊಸ ಅಧ್ಯಾಯ: ಎಂಇಎ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದಂತೆ, "ಮಾರಿಷಸ್ ಜೊತೆ ನಾವು ಐತಿಹಾಸಿತ, ಭೌಗೋಳಿಕತೆ ಮತ್ತು ಸಾಂಸ್ಕೃತಿಕವಾಗಿ ಸಂಪರ್ಕ ಹೊಂದಿದ್ದೇವೆ. ಈ ಭೇಟಿಯು ಭಾರತ–ಮಾರಿಷಸ್ ಸಂಬಂಧದಲ್ಲಿ ಹೊಸ ಅಧ್ಯಾಯವನ್ನು ಆರಂಭಿಸಿದೆ" ಎಂದಿದ್ದಾರೆ.

ಹಿಂದೂ ಮಹಾಸಾಗರದಲ್ಲಿ ಭದ್ರತೆ ಮತ್ತು ವಿಷನ್ ಸಾಗರ್ ಯೋಜನೆಯ ಭಾಗವಾಗಿ ಮಾರಿಷಸ್ ಜೊತೆಗೆ ಪಾಲುದಾರಿಕೆ ಹೆಚ್ಚಿಸುವುದು. ಮಾರಿಷಸ್‌ನಲ್ಲಿರುವ ಭಾರತೀಯರೊಂದಿಗೆ ಸಂವಹನ. ನಾಗರಿಕ ಸೇವಾ ಕಾಲೇಜು ಮತ್ತು ಪ್ರದೇಶ ಆರೋಗ್ಯ ಕೇಂದ್ರದ ಉದ್ಘಾಟನೆ. ಇವೆರಡರ ನಿರ್ಮಾಣಕ್ಕೆ ಭಾರತ ಸರ್ಕಾರದಿಂದ ಅನುದಾನದ ನೆರವು.



ಇದಕ್ಕೂ ಮೊದಲು ಪ್ರಧಾನಿ ಮೋದಿ ತಮ್ಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿದ್ದು, "ಹಿಂದೂ ಮಹಾಸಾಗರದ ಪ್ರಮುಖ ಪಾಲುದಾರ ಮತ್ತು ಆಫ್ರಿಕನ್ ಖಂಡದ ಹೆಬ್ಬಾಗಿಲು ಮಾರಿಷಸ್‌ನ ತಮ್ಮ ಭೇಟಿಯ ಸಮಯದಲ್ಲಿ ಅಲ್ಲಿನ ಪ್ರಧಾನಿ ಜೊತೆಗಿನ ಮಾತುಕತೆಗೆ ಎದುರು ನೋಡುತ್ತಿದ್ದೇನೆ" ಎಂದಿದ್ದರು.

ಮಾರಿಷಸ್‌ನ ರಾಷ್ಟ್ರೀಯ ದಿನಾಚರಣೆಯಲ್ಲಿ ಭಾರತದ ತುಕಡಿಗಳು ಭಾಗಿ: ಮಾರ್ಚ್ 12ರಂದು ನಡೆಯುವ ಮಾರಿಷಸ್‌ನ ರಾಷ್ಟ್ರೀಯ ದಿನಾಚರಣೆಯಲ್ಲಿ ಭಾರತೀಯ ರಕ್ಷಣಾ ಪಡೆಗಳ ತುಕಡಿ ಮತ್ತು ಭಾರತೀಯ ನೌಕಾಪಡೆಯ ಒಂದು ಹಡಗು ಭಾಗವಹಿಸಲಿದೆ. ಪ್ರಧಾನಿ ಮೋದಿ ಅವರು ಕೊನೆಯದಾಗಿ 2015ರಲ್ಲಿ ಮಾರಿಷಸ್‌ಗೆ ಭೇಟಿ ನೀಡಿದ್ದರು.

ಎಲ್ಲ ಸಚಿವರಿಂದ ಪ್ರಧಾನಿ ಮೋದಿಗೆ ಸ್ವಾಗತ: "ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಮಾರಿಷಸ್‌ಗೆ ಆಗಮಿಸುತ್ತಿರುವುದು ಸಂತೋಷ ಮತ್ತು ಅತ್ಯಂತ ಗೌರವವಾಗಿದೆ. ಅವರನ್ನು ನಮ್ಮ ಸರ್ಕಾರದ ಎಲ್ಲ 34 ಸಚಿವರು ಶಿಷ್ಟಾಚಾರದ ಪ್ರಕಾರ ಅದ್ದೂರಿಯಾಗಿ ಸ್ವಾಗತಿಸಲಿದ್ದೇವೆ" ಎಂದು ಮಾರಿಷಸ್ ಉಪ ವಿದೇಶಾಂಗ ಸಚಿವ ಹ್ಯಾಂಬಿರಾಜೆನ್ ನರಸಿಂಗನ್ ಹೇಳಿದ್ದಾರೆ.

"ಉಭಯ ದೇಶಗಳು ಈಗಾಗಲೇ ಅತ್ಯುತ್ತಮ ಪಾಲುದಾರಿಕೆ ಹೊಂದಿವೆ. ಇದು ಮತ್ತಷ್ಟು ಬಲವಾಗಲು ಇದು ವಿಶೇಷ ಸಂದರ್ಭ. ಭಾರತವು ಅನೇಕ ಕ್ಷೇತ್ರಗಳಲ್ಲಿ ತಮ್ಮ ದೇಶಕ್ಕೆ ಮಾದರಿ" ಎಂದು ಅವರು ತಿಳಿಸಿದ್ದಾರೆ.


# ಶಬರಿಮಲೆ ಸನ್ನಿಧಿಯಲ್ಲಿ ಹೊಸ ವ್ಯವಸ್ಥೆ

**ಕೇರಳ:** ಶಬರಿಮಲೆಯಲ್ಲಿ ವಿರಾಜಮಾನವಾಗಿರುವ ಅಯ್ಯಪ್ಪನನ್ನು ಇನ್ನು ಮುಂದೆ ಭಕ್ತರು ಪೂರ್ಣವಾಗಿ ಕಣ್ತುಂಬಿಕೊಳ್ಳಬಹುದು. ದೇವಸ್ವಂ ಮಂಡಳಿಯು ಭಕ್ತರ ದರ್ಶನಕ್ಕೆ ಹೊಸ ವ್ಯವಸ್ಥೆ ರೂಪಿಸಿದೆ. ಇದರಿಂದ ದಟ್ಟಣೆಯ ಸಮಯದಲ್ಲೂ ಆರಾಮವಾಗಿ ಸ್ವಾಮಿಯ ದರ್ಶನ ಪಡೆಯಲು ಸಾಧ್ಯವಾಗಲಿದೆ.

ತಿರುವಾಂಕೂರು ದೇವಸ್ವಂ ಮಂಡಳಿಯ ಅಧ್ಯಕ್ಷ ಪಿ.ಎಸ್. ಪ್ರಶಾಂತ್ ಅವರು ಈ ಬಗ್ಗೆ ಮಾಹಿತಿ ಹಂಚಿಕೊಂಡಿದ್ದು, ಅಯ್ಯಪ್ಪ ಸ್ವಾಮಿಯ ದರ್ಶನಕ್ಕಾಗಿ ಭಕ್ತರು ಮೂರು ಮಾರ್ಗಗಳಲ್ಲಿ 18 ಮೆಟ್ಟಿಲುಗಳ ಬಳಿ ಬರುತ್ತಿದ್ದರು. ಬಳಿಕ ಅದನ್ನೇರಿ ಸ್ವಾಮಿಯ ದರ್ಶನ ಪಡೆದು ಒಂದೇ ಸಾಲಿನಲ್ಲಿ ಇಲ್ಲಿರು ಫ್ಲೈಓವರ್‌ನಲ್ಲಿ ತೆರಳುತ್ತಿದ್ದರು. ಇದರಿಂದ ಸ್ವಾಮಿಯನ್ನು ಮನಸಾರೆ ಕಣ್ತುಂಬಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಈ ಬಗ್ಗೆ ಭಕ್ತರು ಆಕ್ಷೇಪ ವ್ಯಕ್ತಪಡಿಸುತ್ತಿರುವ ಹಿನ್ನೆಲೆಯಲ್ಲಿ ದರ್ಶನ ವ್ಯವಸ್ಥೆಯನ್ನು ಬದಲಿಸಲಾಗಿದೆ ಎಂದರು.

ಹೊಸ ವ್ಯವಸ್ಥೆಯಡಿ ದರ್ಶನಕ್ಕೆ ಅವಕಾಶ: ಮಾರ್ಚ್ 14 ರಂದು ಮೀನಮಾಸ ಪೂಜೆಗಾಗಿ ದೇವಾಲಯ ತೆರೆದಾಗ ಹೊಸ ವ್ಯವಸ್ಥೆಯನ್ನು ಪ್ರಾಯೋಗಿಕವಾಗಿ ಜಾರಿಗೆ ತರಲಾಗುವುದು. ಈ ಹೊಸ ವ್ಯವಸ್ಥೆಯು ಯಾತ್ರಿಕರಿಗೆ ದರ್ಶನಕ್ಕೆ ಹೆಚ್ಚಿನ ಸಮಯವನ್ನು ನೀಡುತ್ತದೆ. ಸದ್ಯ, ಭಕ್ತರಿಗೆ ಅಯ್ಯಪ್ಪನ ದರ್ಶನ ಪಡೆಯಲು ಕೇವಲ ನಾಲ್ಕರಿಂದ ಐದು ಸೆಕೆಂಡುಗಳು ಮಾತ್ರ ಸಿಗುತ್ತದೆ. ಆದರೆ, ಹೊಸ ವ್ಯವಸ್ಥೆಯಲ್ಲಿ ಸ್ವಾಮಿಯನ್ನು 20 ರಿಂದ 25 ಸೆಕೆಂಡುಗಳಷ್ಟು ಸಮಯ ಕಾಣಬಹುದು ಎಂದು ತಿಳಿಸಿದರು.

ಹೊಸ ವ್ಯವಸ್ಥೆಯಡಿ, 18 ಮೆಟ್ಟಿಲುಗಳನ್ನು ಹತ್ತಿ ಬರುವ ಭಕ್ತರನ್ನು ಇಲ್ಲಿರುವ ಎರಡು ಧ್ವಜಸ್ತಂಭದಲ್ಲಿ ವಿಂಗಡಿಸಲಾಗುತ್ತದೆ. ಎಡದಿಂದ ಪ್ರವೇಶಿಸುವವರು ಸ್ವಲ್ಪ ಎತ್ತರದ ವೇದಿಕೆಯಲ್ಲಿರುತ್ತಾರೆ. ಅಲ್ಲಿ ಅವರು ಸ್ವಾಮಿಯ ದರ್ಶನ ಪಡೆದು ಬಲಕ್ಕೆ ತಿರುಗಲಿದ್ದಾರೆ. ಬಲಭಾಗದಿಂದ ಬರುವ ಯಾತ್ರಿಕರು ನೆಲದ ಮಟ್ಟದಲ್ಲಿರುತ್ತಾರೆ. ದರ್ಶನದ ಬಳಿಕ ಎಡಕ್ಕೆ ತಿರುಗಿ ಮುಂದೆ ಸಾಗಲಿದ್ದಾರೆ. ಇದರಿಂದ ಎರಡೂ ಕಡೆಯಿಂದ ಬರುವವರ ಮಧ್ಯೆ ತಿಕ್ಕಾಟ ತಪ್ಪಲಿದೆ ಎಂದರು.



ಬದಲಾವಣೆಗೆ ಕೋರ್ಟ್‌ನಿಂದ ಅನುಮತಿ: ಹೊಸ ವ್ಯವಸ್ಥೆಯು ದೇವಾಲಯದ ತಾಂತ್ರಿಕ ರಚನೆಯನ್ನು ಬದಲಿಸುವುದಿಲ್ಲ. ದೇವಸ್ಥಾನದ ತಂತ್ರಿಯಿಂದ ಅನುಮೋದನೆ ಪಡೆಯಲಾಗಿದೆ. ಪ್ರಸ್ತುತ, ಭಕ್ತರು ದೇವಾಲಯದ ಮುಂದೆ ಮೂರು ಸಾಲುಗಳಲ್ಲಿ ಆಗಮಿಸಿ, ಒಂದೇ ಹಾದಿಯಲ್ಲಿ 18 ಮೆಟ್ಟಿಲು ಏರುತ್ತಾರೆ. ಇದು ಜನದಟ್ಟಣೆ ಉಂಟು ಮಾಡುತ್ತದೆ. ಈ ಬಗ್ಗೆ ದೂರುಗಳು ಬಂದ ಹಿನ್ನೆಲೆಯಲ್ಲಿ ಮಂಡಳಿಯು ಹೊಸ ವ್ಯವಸ್ಥೆ ರೂಪಿಸಿದೆ ಎಂದು ತಿಳಿಸಿದರು.

ಈ ಬದಲಾವಣೆಗೆ ದೇವಸ್ವಂ ಮಂಡಳಿಯು ಹೈಕೋರ್ಟ್‌ನಿಂದ ಅನುಮತಿಯನ್ನು ಪಡೆದುಕೊಂಡಿದೆ. ಮಂಡಲಪೂಜೆಯ ವೇಳೆ ಭಕ್ತರು ಮತ್ತು ಪೊಲೀಸರ ನಡುವಿನ ಘರ್ಷಣೆಯ ಬಗ್ಗೆ ದೇವಸ್ವಂ ಮಂಡಳಿ ಕಳವಳ ಹೊಂದಿತ್ತು. ಹೊಸ ವ್ಯವಸ್ಥೆಯು ಇದನ್ನು ತಡೆಗಟ್ಟಲಿದೆ. ದೇವಾಲಯದ ಮುಂದೆ ಭಕ್ತರ ಸುಗಮ ದರ್ಶನಕ್ಕೆ ಅವಕಾಶವಾಗಲಿದೆ ಎಂದು ಮಾಹಿತಿ ನೀಡಿದರು.

# ಐಪಿಎಲ್: ತಂಬಾಕು, ಮದ್ಯ ಉತ್ಪನ್ನ ಜಾಹೀರಾತು ನಿಷೇಧಿಸಿ:ಕೇಂದ್ರ ಸೂಚನೆ

**ನವದೆಹಲಿ:** ಮಾ.22ರಿಂದ ಇಂಡಿಯನ್ ಪ್ರೀಮಿಯರ್ ಲೀಗ್ ಆರಂಭವಾಗಲಿದೆ. ಕ್ರಿಕೆಟ್ ಹಬ್ಬಕ್ಕಾಗಿ ಅಭಿಮಾನಿಗಳೂ ತುದಿಗಾಲ ಮೇಲೆ ನಿಂತಿದ್ದಾರೆ. ಇದರ ನಡುವೆ ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಕೇಂದ್ರ ಸರ್ಕಾರ ಮಹತ್ವದ ನಿರ್ಧಾರ ಕೈಗೊಂಡಿದೆ.

ಪಂದ್ಯಗಳ ಸಮಯದಲ್ಲಿ ಕ್ರೀಡಾಂಗಣದ ಆವರಣ ಮತ್ತು ದೂರದರ್ಶನ ಪ್ರಸಾರದಲ್ಲಿ ತಂಬಾಕು ಮತ್ತು ಮದ್ಯದ ಜಾಹೀರಾತುಗಳನ್ನು ನಿಷೇಧಿಸುವಂತೆ ಕೇಂದ್ರ ಆರೋಗ್ಯ ಸಚಿವಾಲಯವು ಐಪಿಎಲ್ ಆಡಳಿತ ಮಂಡಳಿಗೆ ಸೂಚಿಸಿದೆ.

ಕ್ರೀಡಾಪಟುಗಳ ಭಾಗವಹಿಸುವಿಕೆ ಬೇಡ: ಐಪಿಎಲ್ ಅಧ್ಯಕ್ಷ ಅರುಣ್ ಸಿಂಗ್ ಧುಮಾಲ್ ಅವರಿಗೆ ಪತ್ರ ಬರೆದಿರುವ ಆರೋಗ್ಯ ಸಚಿವಾಲಯ, ಕ್ರೀಡಾಂಗಣ ಮತ್ತು ವಾಹಿನಿಗಳಲ್ಲಿ ಪಂದ್ಯ ಪ್ರಸಾರದ ವೇಳೆ ತಂಬಾಕು ಮತ್ತು ಮದ್ಯ ಉತ್ಪನ್ನಗಳ ಕುರಿತು ಪ್ರಚಾರ ಮಾಡಬೇಡಿ. ಕ್ರೀಡಾಪಟುಗಳು, ಕಾಮೆಂಟೇಟರ್ಸ್ ಸೇರಿದಂತೆ ಅಂತಹ ಉತ್ಪನ್ನಗಳ ಜಾಹೀರಾತಿನಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಕಾಣಿಸಿಕೊಳ್ಳದಂತೆ ಮನವಿ ಮಾಡಿದೆ.

ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಗೂ ಪತ್ರ ರವಾನಿಸಲಾಗಿದ್ದು, ದೇಶದಲ್ಲಿ ಹೃದಯ ಸಂಬಂಧಿ, ಕ್ಯಾನ್ಸರ್, ಶ್ವಾಸಕೋಶ ಸಮಸ್ಯೆ, ಮಧುಮೇಹ, ಅಧಿಕ ರಕ್ತದೊತ್ತಡ(ಬಿಪಿ) ಇತ್ಯಾದಿ ಕಾಯಿಲೆಗಳಿಂದ ವರ್ಷಕ್ಕೆ ಶೇಕಡಾ 70 ಕ್ಕಿಂತ ಹೆಚ್ಚು ಸಾವುಗಳು ಸಂಭವಿಸುತ್ತಿವೆ. ತಂಬಾಕು ಮತ್ತು ಮದ್ಯ ಸೇವನೆಯು ಈ ರೋಗಗಳಿಗೆ ಕಾರಣವಾಗುತ್ತಿದೆ. ಹೀಗಾಗಿ, ಇದರ ಪ್ರಚಾರದಿಂದ ದೂರ ಇರೋಣ ಎಂದು ಸಲಹೆ ನೀಡಿದೆ.

ಐಪಿಎಲ್ ದೇಶದಲ್ಲಿ ಅತ್ಯಂತ ಜನಪ್ರಿಯ ಟೂರ್ನಿಯಾಗಿದೆ. ಕೋಟ್ಯಂತರ ಜನರು ಇದನ್ನು ವೀಕ್ಷಿಸುತ್ತಾರೆ. ಈ ವೇಳೆ ತಂಬಾಕು–ಮದ್ಯದ ಉತ್ಪನ್ನಗಳ ಪ್ರಚಾರ ನಡೆಸಿದಲ್ಲಿ ಸಾರ್ವಜನಿಕ ಆರೋಗ್ಯ ಮತ್ತು ಫಿಟ್‌ನೆಸ್ ವಿರುದ್ಧ ಸಂದೇಶ ರವಾನಿಸಿದಂತಾಗುತ್ತದೆ. ಆದ್ದರಿಂದ, ಕ್ರೀಡಾಕೂಟಕ್ಕೆ ಸಂಬಂಧಿಸಿದ ಎಲ್ಲ ವೇದಿಕೆಗಳಲ್ಲಿ ಈ ಉತ್ಪನ್ನಗಳ ಪ್ರಚಾರ ನಿಷೇಧಿಸಿ ಎಂದು ಕೇಂದ್ರ ಸರ್ಕಾರ ಹೇಳಿದೆ.

# ಪಟಾಕಿ ಅಂಗಡಿಯಲ್ಲಿ ಬೆಂಕಿ ಅವಘಡ: 5 ಮಂದಿ ಸಜೀವ ದಹನ

**ಜಾರ್ಖಂಡ್:** ಇಲ್ಲಿನ ಗರ್ಹ್ವಾದಲ್ಲಿನ ಪಟಾಕಿ ಅಂಗಡಿಯೊಂದರಲ್ಲಿ ಬೆಂಕಿ ಅವಘಡ ಸಂಭವಿಸಿ ಐವರು ಸಜೀವ ದಹನವಾಗಿರುವ ಘಟನೆ ಸೋಮವಾರ ನಡೆದಿದೆ. ಪಟಾಕಿ ಪರೀಕ್ಷೆ ವೇಳೆ ಈ ಅವಘಡ ನಡೆದಿದೆ ಎಂಬುದಾಗಿ ತಿಳಿದುಬಂದಿದೆ. ರಂಕಾ ಪೊಲೀಸ್ ಠಾಣೆ ವ್ಯಾಪ್ತಿಯ ಗೋದರ್ಮಾನ ಬಜಾರ್‌ನಲ್ಲಿ ಈ ಘಟನೆ ನಡೆದಿದೆ.



"ಇಲ್ಲಿನ ಪಟಾಕಿ ಅಂಗಡಿಯಲ್ಲಿ ಬೆಂಕಿ ಕಾಣಿಸಿಕೊಂಡ ನಂತರ ಐವರು ಸಾವನ್ನಪ್ಪಿದ್ದಾರೆ. ಇವರಲ್ಲಿ ಮೂವರು ಮಕ್ಕಳು ಸೇರಿದ್ದಾರೆ. ನಾವು ಘಟನೆಯ ಬಗ್ಗೆ ತನಿಖೆ ನಡೆಸುತ್ತಿದ್ದೇವೆ" ಎಂದು ಗರ್ಹ್ವಾ ಎಸ್‌ಪಿ ದೀಪಕ್ ಪಾಂಡೆ ಘಟನೆಯ ಬಗ್ಗೆ ಮಾಹಿತಿ ನೀಡಿದ್ದಾರೆ.

ಅಂಗಡಿಯಲ್ಲಿನ ಮರದ ಪ್ಲಾಟ್‌ಫಾರ್ಮ್‌ನಲ್ಲಿ ಪಟಾಕಿಗಳನ್ನು ಮಾರಾಟ ಮಾಡುತ್ತಿದ್ದಾಗ ಮಧ್ಯಾಹ್ನ 12.30 ರ ಸುಮಾರಿಗೆ ಬೆಂಕಿ ಕಾಣಿಸಿಕೊಂಡಿದೆ ಎಂದು ರಂಕಾ ಎಸ್‌ಡಿಪಿಒ ರೋಹಿತ್ ರಂಜನ್ ಸಿಂಗ್ ಹೇಳಿದ್ದಾರೆ. "ನಾವು ಗಾಯಾಳುಗಳನ್ನು ನೆರೆಯ ಛತ್ತೀಸ್‌ಗಢದ ಹತ್ತಿರದ ಆಸ್ಪತ್ರೆಗೆ ಕರೆದೊಯ್ದೆವು. ಆದರೆ ಚಿಕಿತ್ಸೆ ಫಲಿಸದೇ ಅವರೆಲ್ಲ ಸಾವನ್ನಪ್ಪಿದ್ದಾರೆ ಎಂದು ವೈದ್ಯರು ತಿಳಿಸಿದರು" ಎಂದು ಸಿಂಗ್ ಹೇಳಿದ್ದಾರೆ.

ರಾಜ್ಯಪಾಲ ಸಂತೋಷ್ ಕುಮಾರ್ ಗಂಗ್ವಾರ್ ಮತ್ತು ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವಘಡದಲ್ಲಿ ಉಂಟಾದ ಜೀವಹಾನಿಯ ಬಗ್ಗೆ ಸಂತಾಪ ವ್ಯಕ್ತಪಡಿಸಿದ್ದಾರೆ.

**ಸಂತಾಪ ಸೂಚಿಸಿದ ಜಾರ್ಖಂಡ್ ಸಿಎಂ ಹೇಮಂತ ಸೊರೇನ್:** "ಗರ್ಹ್ವಾದ ರಂಕಾದಲ್ಲಿರುವ ಪಟಾಕಿ ಅಂಗಡಿಯಲ್ಲಿ ಸಂಭವಿಸಿದ ಬೆಂಕಿ ಅವಘಡದಿಂದ ಐದು ಜನರು ಸಾವನ್ನಪ್ಪಿದ ದುಃಖದ ಸುದ್ದಿ ಬಂದಿದೆ. 'ಮರಂಗ್ ಬುರು' (ಬುಡಕಟ್ಟು ಜನಾಂಗದ ಸರ್ವೋಚ್ಚ ದೇವತೆ) ಅಗಲಿದ ಆತ್ಮಗಳಿಗೆ ಶಾಂತಿ ನೀಡಲಿ ಮತ್ತು ದುಃಖಿತ ಕುಟುಂಬ ಸದಸ್ಯರಿಗೆ ಈ ನಷ್ಟವನ್ನು ಭರಿಸುವ ಶಕ್ತಿಯನ್ನು ನೀಡಲಿ" ಎಂದು ಸೊರೇನ್ ತಮ್ಮ ಎಕ್ಸ್ ಖಾತೆಯ ಪೋಸ್ಟ್? ನಲ್ಲಿ ಬರೆದುಕೊಂಡಿದ್ದಾರೆ. ಅಲ್ಲದೇ, ಪ್ರಕರಣದ ಕುರಿತು ಜಿಲ್ಲಾಡಳಿತದಿಂದ ತನಿಖೆ ನಡೆಯುತ್ತಿದೆ ಎಂದು ಮಾಹಿತಿ ನೀಡಿದ್ದಾರೆ.

# ಆರ್‌ಎಸ್‌ಎಸ್ ವಿರುದ್ಧ ಮಾತನಾಡದಂತೆ ಹೇಳಿದ್ದರು: ದಿಗ್ವಿಜಯ್ ಸಿಂಗ್

**ಮಧ್ಯಪ್ರದೇಶ:** "ನಾನು ಮುಖ್ಯಮಂತ್ರಿಯಾಗಿದ್ದಾಗ ಗುಜರಾತ್‌ಗೆ ಪ್ರಚಾರ ಮಾಡಲು ಹೋಗಿದ್ದು, ನನಗೆ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ವಿರುದ್ಧ ಮಾತನಾಡದಂತೆ ಸೂಚಿಸಿದ್ದರು. ಇಂಥವರು ಪಕ್ಷದಲ್ಲೇ ಇದ್ದುಕೊಂಡು ಬಿಜೆಪಿಗೆ ನೆರವು ನೀಡುವ ದ್ರೋಹಿಗಳು" ಎಂದು ಕಾಂಗ್ರೆಸ್ ಹಿರಿಯ ನಾಯಕ ದಿಗ್ವಿಜಯ್ ಸಿಂಗ್ ಹೇಳಿದ್ದಾರೆ.

ಬಿಜೆಪಿಗೆ ನೆರವು ನೀಡುವ ಕಾಂಗ್ರೆಸ್ಸಿಗರನ್ನು ಕಿತ್ತೊಗೆಯಬೇಕು ಎಂಬ ಲೋಕಸಭೆಯಲ್ಲಿ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರ ಹೇಳಿಕೆಗೆ ಬೆಂಬಲ ನೀಡಿ ತಮ್ಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಹಂಚಿಕೊಂಡಿರುವ ಮಧ್ಯ ಪ್ರದೇಶದ ಮಾಜಿ ಸಿಎಂ, "ಆರ್‌ಎಸ್‌ಎಸ್ ಅನ್ನು ಟೀಕಿಸಿದರೆ ಹಿಂದುಗಳು ಸಿಟ್ಟಾಗುತ್ತಾರೆ. ಹೀಗಾಗಿ ಸಂಘವನ್ನು ಟೀಕೆ ಮಾಡದಂತೆ ಸಲಹೆ ನೀಡಲಾಗಿತ್ತು" ಎಂದಿದ್ದಾರೆ.



"ರಾಹುಲ್ ಗಾಂಧಿ ಅವರು ಪಕ್ಷದೊಳಗಿನ ಬಿಜೆಪಿ ಬೆಂಬಲಿಗರನ್ನು ಹೊರಹಾಕುವುದಾಗಿ ಹೇಳಿದ್ದಾರೆ. ನಾನು ಅವರ ಹೇಳಿಕೆಯನ್ನು ಬೆಂಬಲಿಸುವೆ. ಪಕ್ಷದ್ರೋಹಿಗಳನ್ನು ಅವರು ಹೊರಹಾಕುವ ದಿನಕ್ಕಾಗಿ ಕಾಯುತ್ತಿದ್ದೇನೆ" ಎಂದು ಹೇಳಿದ್ದಾರೆ.

ಸಂಘವು ಹಿಂದೂಗಳನ್ನು ಪ್ರತಿನಿಧಿಸುವುದಿಲ್ಲ ಎಂದು ಪ್ರತಿಪಾದಿಸಿರುವ ಅವರು, "ಅದು ಧರ್ಮದ ಹೆಸರಿನಲ್ಲಿ ಸಮುದಾಯವನ್ನು ದಾರಿ ತಪ್ಪಿಸುತ್ತದೆ. ಶೋಷಣೆಗೆ ಗುರಿ ಮಾಡುತ್ತದೆ. ಇದರ ಜೊತೆಗೆ ಬಿಜೆಪಿ ಸೇರಿಕೊಂಡು ಹಿಂದು ಸಮುದಾಯವನ್ನು ಒಡೆದು, ಅದರ ಆಧಾರದ ಮೇಲೆ ಅಧಿಕಾರ ಹಿಡಿಯಲು ಬಯಸುತ್ತದೆ" ಎಂದು ಟೀಕಿಸಿದ್ದಾರೆ.

**ರಾಹುಲ್ ಗಾಂಧಿ ಹೇಳಿದ್ದೇನು:** ಇತ್ತೀಚೆಗೆ ಗುಜರಾತ್‌ನ ಅಹಮದಾಬಾದ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ್ದ ರಾಹುಲ್ ಗಾಂಧಿ, "ಗುಜರಾತ್‌ನ ಕಾಂಗ್ರೆಸ್ ಸಂಘಟನೆ ಜನರಿಂದ ಸಂಪೂರ್ಣವಾಗಿ ದೂರವಾಗಿದೆ. ಬಿಜೆಪಿ ಬೆಂಬಲಿಗರಾಗಿ ಕೆಲಸ ಮಾಡುತ್ತಿದೆ. ಇಂಥ ಪಕ್ಷದ್ರೋಹಿಗಳನ್ನು ಗುರುತಿಸಿ ಉಚ್ಚಾಟನೆ ಮಾಡಬೇಕಿದೆ" ಎಂದು ಎಚ್ಚರಿಸಿದ್ದರು.

"ಪಕ್ಷದ ಮೊದಲ ಕೆಲಸವೆಂದರೆ ಕಾಂಗ್ರೆಸ್ ಕಾರ್ಯಕರ್ತರು ಮತ್ತು ನಾಯಕರ ಎರಡು ಗುಂಪುಗಳನ್ನು ಬೇರ್ಪಡಿಸುವುದು. ಒಂದು ಪಕ್ಷದ ಸಿದ್ಧಾಂತವನ್ನು ತಮ್ಮ ಹೃದಯದಲ್ಲಿ ಹೊತ್ತುಕೊಂಡು ಸಾರ್ವಜನಿಕರೊಂದಿಗೆ ನಿಲ್ಲುವವರು ಮತ್ತು ಇನ್ನೊಂದು ಸಾರ್ವಜನಿಕರಿಂದ ಸಂಪರ್ಕ ಕಡಿತಗೊಂಡು ಬಿಜೆಪಿ ಜೊತೆಗೆ ಇರುವವರು. ಇಂಥವರನ್ನು ಫಿಲ್ಟರ್ ಮಾಡುವ ಅಗತ್ಯವಿದೆ" ಎಂದಿದ್ದರು.

# ಬಸ್‌ನಲ್ಲಿ ವಿದ್ಯಾರ್ಥಿ ಮೇಲೆ ಹಲ್ಲೆ; ಮೂವರು ವಶಕ್ಕೆ

**ತಮಿಳುನಾಡು:** ಯುವತಿಯನ್ನು ಚೇಡಿಸಿದ ವಿಚಾರಕ್ಕೆ ಬಸ್‌ನಲ್ಲಿ ವಿದ್ಯಾರ್ಥಿಗಳ ನಡುವೆ ಕಾದಾಟ ನಡೆದಿದ್ದು, 11ನೇ ತರಗತಿ ವಿದ್ಯಾರ್ಥಿಯೊಬ್ಬನ ಮೇಲೆ ಮೂವರು ಮಾರಣಾಂತಿಕವಾಗಿ ಹಲ್ಲೆ ನಡೆಸಿದ ಘಟನೆ ಸೋಮವಾರ ತಿರುನೆಲ್ವೇಲಿಯಲ್ಲಿ ನಡೆದಿದೆ.

ಶ್ರೀವೈಕುಂಠಂ ಬಳಿ ಶಾಲಾ ಬಸ್‌ನಲ್ಲೇ ಇಬ್ಬರು ಅಪ್ರಾಪ್ತರು ಸೇರಿದಂತೆ ಮೂವರು, ವಿದ್ಯಾರ್ಥಿಗೆ ಥಳಿಸಿದ್ದಾರೆ. ಗಾಯಾಳು ಬಾಲಕ ಪಲಯಂಕೊಟ್ಟೈನಲ್ಲಿನ ಶಾಲೆಯ ವಿದ್ಯಾರ್ಥಿ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಘಟನೆಯ ವಿವರ: ಗಾಯಗೊಂಡ ವಿದ್ಯಾರ್ಥಿ ಮಾರ್ಚ್ 10ರಂದು ಪಬ್ಲಿಕ್ ಪರೀಕ್ಷೆ ಬರೆಯಲು ಬಸ್‌ನಲ್ಲಿ ತೆರಳುತ್ತಿದ್ದ. ಈ ವೇಳೆ ಶ್ರೀವೈಕುಂಠಂ ಬಳಿಯ ಕೆಟ್ಟಿಯಮ್ಮಲಪುರಂನಿಂದ ಆಗಮಿಸುವ ಶಾಲಾ ಯುವತಿಗೆ ಚೇಡಿಸಿದ್ದಾನೆ. ವಿದ್ಯಾರ್ಥಿನಿ ತನ್ನ ಸ್ನೇಹಿತರೊಂದಿಗೆ ಹಾಗು ಬಸ್‌ನಲ್ಲಿದ್ದ ತನ್ನ ಇಬ್ಬರು ಸಹೋದರರಿಗೂ ತಿಳಿಸಿದ್ದಾಳೆ. ಇದರಿಂದ ಕೆರಳಿದ ಮೂವರು ವಿದ್ಯಾರ್ಥಿಗಳು ಬಾಲಕನ ಮೇಲೆ ಮನಸೋಇಚ್ಛೆ ಹಲ್ಲೆ ನಡೆಸಿದ್ದಾರೆ. ತೀವ್ರ ರಕ್ತಸ್ರಾವದಿಂದ ವಿದ್ಯಾರ್ಥಿ ಗಂಭೀರವಾಗಿ ಗಾಯಗೊಂಡಿದ್ದು, ಶ್ರೀವೈಕುಂಠಂ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ವಿದ್ಯಾರ್ಥಿ ಮೇಲೆ ಹಲ್ಲೆ ಮಾಡಿದ ಮೂವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.




ತಿರುನೆಲ್ವೇಲಿ ಜಿಲ್ಲಾಧಿಕಾರಿ ಆರ್.ಸುಕುಮಾರ್, ತೂತುಕುಡಿ ಜಿಲ್ಲಾಧಿಕಾರಿ ಕೆ.ಇಲಂಬವತ್, ತೂತುಕುಡಿ ಎಸ್‌ಪಿ ಆಲ್ಬರ್ಟ್ ಜಾನ್ ಮತ್ತು ಇತರೆ ಹಿರಿಯ ಅಧಿಕಾರಿಗಳು ಆಸ್ಪತ್ರೆಗೆ ಭೇಟಿ ನೀಡಿ, ವಿದ್ಯಾರ್ಥಿಯ ಆರೋಗ್ಯ ವಿಚಾರಿಸಿದ್ದಾರೆ.

ತಿರುನೇಲ್ವೇಲಿ ವೈದ್ಯಕೀಯ ಕಾಲೇಜು ಆಸ್ಪತ್ರೆ ಡೀನ್ ಡಾ.ರೇವತಿ ಬಾಲನ್ ಮಾತನಾಡಿ, "ಗಾಯಗೊಂಡ ವಿದ್ಯಾರ್ಥಿಯ ಆರೋಗ್ಯ ಸ್ಥಿರವಾಗಿದ್ದು, ಚೇತರಿಸಿಕೊಳ್ಳುತ್ತಿದ್ದಾನೆ" ಎಂದಿದ್ದಾರೆ.


# ಉಕ್ರೇನ್ ರಷ್ಯಾ ಮೇಲೆ ವ್ಯಾಪಕ ಡ್ರೋನ್ ದಾಳಿ

**ರಷ್ಯಾ:** ಮಾಸ್ಕೋ ಮತ್ತು ರಾಜಧಾನಿ ಸುತ್ತಮುತ್ತಲಿನ ಪ್ರದೇಶಗಳ ಮೇಲೆ ರಾತ್ರೋರಾತ್ರಿ ಉಕ್ರೇನ್ ನಡೆಸಿದ ಬೃಹತ್ ಪ್ರಮಾಣದ ಡ್ರೋನ್ ದಾಳಿಯಲ್ಲಿ ಕನಿಷ್ಠ ಓರ್ವ ಸಾವನ್ನಪ್ಪಿದ್ದು, ಮೂವರು ಗಾಯಗೊಂಡಿದ್ದಾರೆ ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ.

ರಾಜಧಾನಿಯ ಹೊರವಲಯದಲ್ಲಿರುವ ವಿಡ್ನೋಯ್ ಮತ್ತು ಡೊಮೊಡೆಡೊವೊ ಪಟ್ಟಣಗಳಲ್ಲಿ ಸಾವು–ನೋವು ಸಂಭವಿಸಿವೆ ಹಾಗೂ ಏಳು ವಸತಿ ಅಪಾರ್ಟ್‌ಮೆಂಟ್‌ಗಳಿಗೆ ಹಾನಿಯಾಗಿದೆ ಎಂದು ಪ್ರಾದೇಶಿಕ ಗವರ್ನರ್ ಆಂಡ್ರೆ ವೊರೊಬ್ಯೆವ್ ಹೇಳಿದ್ದಾರೆ.

73 ಡ್ರೋನ್ ಹೊಡೆದುರುಳಿಸಲಾಗಿದೆ–ಮಾಸ್ಕೋ: ಮಾಸ್ಕೊ ಮೇಲೆ ಹಾರಿ ಬರುತ್ತಿದ್ದ 73 ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ ಎಂದು ಮಾಸ್ಕೋ ಮೇಯರ್ ಸೆರ್ಗೆಯ್ ಸೊಬ್ಯಾನಿನ್ ಹೇಳಿದ್ದಾರೆ. ಇದು ಫೆಬ್ರವರಿ 2022ರಲ್ಲಿ ರಷ್ಯಾ ಉಕ್ರೇನ್ ಮೇಲೆ ಪೂರ್ಣ ಪ್ರಮಾಣದ ಆಕ್ರಮಣವನ್ನು ಪ್ರಾರಂಭಿಸಿದ ನಂತರ ಉಕ್ರೇನ್ ಕಡೆಯಿಂದ ನಡೆಸಲಾದ ಅತಿದೊಡ್ಡ ದಾಳಿಗಳಲ್ಲಿ ಒಂದಾಗಿದೆ.

ವ್ಯಾಪಕ ಡ್ರೋನ್ ದಾಳಿಯ ನಂತರ ಒಂದು ಜಿಲ್ಲೆಯಲ್ಲಿನ ರೈಲು ಸಂಚಾರ ಜಾಲವನ್ನು ಸ್ಥಗಿತಗೊಳಿಸಲಾಗಿದೆ ಮತ್ತು ಮಾಸ್ಕೋದ ವಿಮಾನ ನಿಲ್ದಾಣಗಳಲ್ಲಿ ವಿಮಾನ ಸಂಚಾರಕ್ಕೆ ನಿರ್ಬಂಧಗಳನ್ನು ಜಾರಿಗೊಳಿಸಲಾಗಿದೆ.



ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧವನ್ನು ಕೊನೆಗೊಳಿಸಲು ಸೌದಿ ಅರೇಬಿಯಾದಲ್ಲಿ ಯುಎಸ್ ಮತ್ತು ಉಕ್ರೇನ್ ಪ್ರತಿನಿಧಿಗಳ ನಡುವೆ ಶಾಂತಿ ಮಾತುಕತೆ ನಡೆಯುವ ಕೆಲವೇ ಗಂಟೆಗಳ ಮುನ್ನ ಈ ದಾಳಿ ನಡೆದಿರುವುದು ಗಮನಾರ್ಹ.

ಡ್ರೋನ್ ದಾಳಿಯಿಂದಾಗ ಹಾನಿಯ ಬಗ್ಗೆ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿರುವ ಗವರ್ನರ್ ವೊರೊಬಿಯೆವ್, ಹಾನಿಗೊಳಗಾದ ಒಂದು ಅಪಾರ್ಟ್‌ಮೆಂಟ್ ಹಾಗೂ ಸುಟ್ಟುಹೋಗಿರುವ ಕಾರುಗಳ ಚಿತ್ರಗಳನ್ನು ಶೇರ್ ಮಾಡಿದ್ದಾರೆ. ರಾತ್ರೋರಾತ್ರಿ ನಡೆದ ದಾಳಿಯ ನಂತರ ಹಾನಿಗೊಳಗಾದ ವಸತಿ ಕಟ್ಟಡಗಳಿಂದ ಮೂವರು ಮಕ್ಕಳು ಸೇರಿದಂತೆ 12 ಜನರನ್ನು ಸ್ಥಳಾಂತರಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಪ್ರತಿವರ್ಷ ಲಕ್ಷಾಂತರ ಪ್ರಯಾಣಿಕರು ಸಂಚರಿಸುವ ಮಾಸ್ಕೋದ ಶೆರೆಮೆಟ್ಯೆವೊ, ಡೊಮೊಡೆಡೊವೊ ಮತ್ತು ವ್ನುಕೊವೊ ವಿಮಾನ ನಿಲ್ದಾಣಗಳಲ್ಲಿ ವಿಮಾನ ಸಂಚಾರದ ಮೇಲೆ ನಿರ್ಬಂಧ ವಿಧಿಸಲಾಗಿದೆ.

ಮಾಸ್ಕೋ ಮತ್ತು ರಷ್ಯಾದ ಇತರ ಒಂಬತ್ತು ಪ್ರದೇಶಗಳಲ್ಲಿ ಒಟ್ಟಾರೆ 337 ಉಕ್ರೇನಿಯನ್ ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ ಎಂದು ರಷ್ಯಾದ ರಕ್ಷಣಾ ಸಚಿವಾಲಯ ನಂತರ ವರದಿ ಮಾಡಿದೆ. ಆದಾಗ್ಯೂ ಉಕ್ರೇನ್ ಈ ವಿಷಯದ ಬಗ್ಗೆ ಇನ್ನೂ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

# ಬಿಸಿಲ ಧಗೆ: ಪ್ರಯಾಣಿಕರಿಗೆ ಪಾಲಿಕೆಯಿಂದ ನೆರಳಿನ ಆಸರೆ

**ಚೆನ್ನೈ:** ತಮಿಳುನಾಡಿನಲ್ಲಿ ಅವಧಿಪೂರ್ವವೇ ಬಿಸಿಲ ಬೇಗೆ ಹೆಚ್ಚಾಗುತ್ತಿದೆ. ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಜನರು ಸೂರ್ಯನ ಪ್ರಕೋಪಕ್ಕೆ ಹೈರಾಣಾಗುತ್ತಿದ್ದಾರೆ. ಸಾಮಾನ್ಯವಾಗಿ ಏಪ್ರಿಲ್ ಮತ್ತು ಮೇಯಲ್ಲಿ ತಾಪ ಹೆಚ್ಚಾಗುತ್ತಿತ್ತು. ಆದರೆ ಈ ಬಾರಿ ಮಾರ್ಚ್ ಆರಂಭದಲ್ಲೇ ಅಸಹನೀಯ ಪರಿಸ್ಥಿತಿ ಎದುರಾಗಿದೆ.

ರಸ್ತೆಯಲ್ಲಿ ಮಾಲಿನ್ಯದ ಜೊತೆಗೆ ಏರುಗತಿಯಲ್ಲಿ ಸಾಗಿರುವ ತಾಪಮಾನದಿಂದ ಪ್ರಯಾಣಿಕರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಗ್ರೇಟರ್ ಚೆನ್ನೈ ಕಾರ್ಪೊರೇಷನ್, ನಗರದ 14 ಅಂತರ್‌ವಲಯದಲ್ಲಿ ಹಸಿರು ಹೊದಿಕೆ ನೆಟ್ ಅಳವಡಿಸಿದೆ. ಇದು ಸಿಗ್ನಲ್‌ಗಳಲ್ಲಿ ಪಾದಚಾರಿ ಮತ್ತು ವಾಹನ ಸವಾರರಿಗೆ ಕೊಂಚ ನಿರಾಳತೆ ಒದಗಿಸುತ್ತಿದೆ.

ಮಧ್ಯಾಹ್ನ 11ರಿಂದ 3ರವರೆಗೆ ರಾಜ್ಯದೆಲ್ಲೆಡೆ ಬಿಸಿಲು ಹೆಚ್ಚಿದ್ದು, ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಸ್ಥಳದ ಅವಶ್ಯಕತೆಗಳ ಆಧಾರದ ಮೇಲೆ ವಿಭಿನ್ನ ಗಾತ್ರದ ನೆಟ್ ಅಳವಡಿಸಲಾಗಿದೆ. ಅಣ್ಣಾಸಲೈ ಬಿನ್ನಿ ರಸ್ತೆ, ಚಿಂತಾಮಣಿ ಸಿಗ್ನಲ್, ರಾಜ ಮುತ್ತಯ್ಯ ರಸ್ತೆ, ಐಸಿಎಫ್ ಸಿಗ್ನಲ್, ಅಣ್ಣಾ ನಗರ ಸರ್ಕಲ್, ಬಜುಲ್ಲಾ ರಸ್ತೆ, ಉತ್ತರ ಉಸ್ಮಾನ್ ರಸ್ತೆ ಮತ್ತು ಟೈಡೆಲ್ ಪಾರ್ಕ್ ವೆಸ್ಟ್ ಅವೆನ್ಯೂದಲ್ಲಿ ಈ ನೆಟ್ ಹಾಕಲಾಗಿದೆ.



ಬಿಸಿಲಿಗೆ ಈ ರೀತಿಯ ನೆರಳಿನ ಆಸರೆ ಒದಗಿಸುತ್ತಿರುವ ಕಾರ್ಪೊರೇಷನ್ ಕ್ರಮಕ್ಕೆ ಜನರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಪ್ರಯಾಣಿಕರ ಅಯನವರಂ ಮುತ್ತು ಎಂಬವರು ಮಾತನಾಡಿ, "ಸಿಗ್ನಲ್‌ಗಳ ಉದ್ದಕ್ಕೂ ಗ್ರೀನ್ ಶೇಡ್ ನೆಟ್ ಹಾಕಿರುವುದರಿಂದ ಶಾಖದಿಂದ ಜನರು ಕೆಲಕಾಲವಾದರೂ ಪಾರಾಗಬಹುದು. ಇದರಿಂದ ಸಿಗ್ನಲ್ ರಣಬಿಸಿಲಿನಲ್ಲಿ ಕಾಯುವ ಒತ್ತಡ ಕಡಿಮೆಯಾಗುತ್ತದೆ" ಎಂದರು.

ರೊಯಪೆಟ್ಟಾ ಕೃಷ್ಣಕುಮಾರಿ ಪ್ರತಿಕ್ರಿಯಿಸಿ, "ಮಕ್ಕಳನ್ನು ಶಾಲೆಯಿಂದ ಕರೆತರುವಾಗ ಈ ನೆಟ್‌ಗಳು ಹೆಚ್ಚು ಪ್ರಯೋಜನಕಾರಿಯಾಗಿದೆ. ಮತ್ತಷ್ಟು ಸಿಗ್ನಲ್‌ಗಳಿಗೆ ಇದನ್ನು ಅಳವಡಿಸಿದರೆ, ಹೆಚ್ಚು ಪ್ರಯೋಜನವಾಗುತ್ತದೆ" ಎಂದರು.

ಬಿಸಿಲಿನಲ್ಲಿ ಪ್ರಯಾಣಿಕರ ಆಸರೆಗಾಗಿ ಈ ರೀತಿಯ ಹಸಿರು ನೆರಳಿನ ನೆಟ್ ಅಳವಡಿಕೆ

# ಚಾಂಪಿಯನ್ಸ್ ಟ್ರೋಫಿ 2025; ಪಾಕಿಸ್ತಾನಕ್ಕೆ ಭಾರೀ ನಷ್ಟ



ಚಾಂಪಿಯನ್ಸ್ ಟ್ರೋಫಿ 2025 : ಪಾಕಿಸ್ತಾನ ನಡೆಸಿದ ಚಾಂಪಿಯನ್ಸ್ ಟ್ರೋಫಿ 2025 ರಲ್ಲಿ ಟೀಮ್ ಇಂಡಿಯಾ ಭರ್ಜರಿ ಜಯ ಸಾಧಿಸಿದೆ. ಪಾಕ್‌ನಲ್ಲಿ ಕಾಲಿಡದೇನೆ ಟೀಮ್ ಇಂಡಿಯಾ ಈ ಸಾಧನೆ ಮಾಡಿದೆ. ಇದರಿಂದ ಯಾವ ಚಾಂಪಿಯನ್ಸ್ ಟ್ರೋಫಿ ನಡೆಸೋದ್ರಿಂದ ಕಷ್ಟಗಳು ದೂರ ಆಗುತ್ತವೋ... ಕ್ರಿಕೆಟ್ ಸರಿಯಾಗುತ್ತೆ ಅಂದುಕೊಂಡಿದ್ದ ಪಾಕಿಸ್ತಾನ ಕ್ರಿಕೆಟ್ ಬೋರ್ಡ್ (ಕಲಃ) ಆಸೆಗಳು ಸುಟ್ಟು ಹೋದವು. ಎಲ್ಲಾ ದೇಶಗಳು ಬಂದರೂ ಒಂದೇ ಒಂದು ಇಂಡಿಯಾ ಆ ದೇಶದಲ್ಲಿ ಕಾಲಿಡದೇ ಇರೋದ್ರಿಂದ ಪಾಕ್ ಭಾರೀ ನಷ್ಟ ಅನುಭವಿಸಿದೆ. ಕೇವಲ ಲೀಗ್ ಹಂತದಿಂದಲೇ ಹೊರಬಿದ್ದಿದ್ದರಿಂದ ಪಾಕಿಸ್ತಾನ ಟೀಮ್ ಮಾನ ಹೋಯ್ತು. ಯಾರ ಕೈಯಲ್ಲಿ ಸೋಲಬಾರದು ಅಂದುಕೊಂಡಿದ್ರೋ, ಅದೇ ಭಾರತದ ಕೈಯಲ್ಲಿ ಹೀನಾಯವಾಗಿ ಸೋತು ಸ್ವಂತ ಪ್ರೇಕ್ಷಕರಿಂದಲೇ ಟೀಕೆಗಳನ್ನು ಎದುರಿಸಿತು ಪಾಕ್. ಆಮೇಲೆ ಇದೇ ಇಂಡಿಯಾ ಕೊನೆಗೆ ಪಾಕ್‌ನಲ್ಲಿ ಒಂದು ಸೆಮಿಫೈನಲ್ ಜೊತೆಗೆ ಫೈನಲ್ ಕೂಡ ನಡೆಯಲು ಬಿಡಲಿಲ್ಲ. ಇದರಿಂದ ಪಾಕ್ ಆರ್ಥಿಕವಾಗಿ ತೀವ್ರವಾಗಿ ನಷ್ಟ ಅನುಭವಿಸಿತು.

ನಿಜ ಹೇಳಬೇಕಂದ್ರೆ 29 ವರ್ಷಗಳ ನಂತರ ಪಾಕಿಸ್ತಾನಕ್ಕೆ ಒಂದು ಐಸಿಸಿ ಟೂರ್ನಮೆಂಟ್ ಆತಿಥ್ಯ ವಹಿಸುವ ಅವಕಾಶ ಸಿಕ್ಕಿತ್ತು. ಆದರೆ, ಭಾರತದ ಕಾರಣದಿಂದ ಆ ಟೂರ್ನಿ ಕೂಡ ಪೂರ್ತಿಯಾಗಿ ಅಲ್ಲಿ ನಡೆಯಲಿಲ್ಲ. ಪಾಕಿಸ್ತಾನದ ಜೊತೆ ದ್ವಿಪಕ್ಷೀಯ ಸಂಬಂಧಗಳು ಸರಿ ಇಲ್ಲದೇ ಇರೋದ್ರಿಂದ ಕ್ರಿಕೆಟ್ ಸಂಬಂಧಗಳು ಕೂಡ ಹಾಳಾದವು. ಇದರಿಂದ ಪಾಕ್‌ನಲ್ಲಿ ಪ್ರವಾಸ ಮಾಡಲು ಟೀಮ್ ಇಂಡಿಯಾಗೆ ಸರ್ಕಾರ ಅನುಮತಿ ಕೊಡಲಿಲ್ಲ. ಈ ಕಾರಣಕ್ಕೆ ಹೈಬ್ರಿಡ್ ಮಾದರಿಯಲ್ಲಿ ಟೀಮ್ ಇಂಡಿಯಾ ಟೂರ್ನಿಯಲ್ಲಿ ಭಾಗವಹಿಸಿತು. ಅಂದರೆ ಎಲ್ಲಾ ದೇಶಗಳ ಮ್ಯಾಚ್‌ಗಳು ಪಾಕಿಸ್ತಾನದಲ್ಲಿ ನಡೆದರೂ, ಇಂಡಿಯಾದ ಜೊತೆ ನಡೆಯುವ ಮ್ಯಾಚ್‌ಗಳು ಮಾತ್ರ ದುಬೈನಲ್ಲಿ ನಡೆದವು. ಹೀಗೆ ಒಂದು ಎರಡಲ್ಲ, ಟೀಮ್ ಇಂಡಿಯಾ ಆಡಿದ ಲೀಗ್, ಸೆಮಿಫೈನಲ್, ಫೈನಲ್ ಮ್ಯಾಚ್‌ಗಳು ದುಬೈನಲ್ಲಿ ನಡೆದವು. ಇದರಿಂದ ಪಾಕಿಸ್ತಾನಕ್ಕೆ ಭಾರೀ ನಷ್ಟ ಉಂಟಾಯಿತು.

ಟೀಮ್ ಇಂಡಿಯಾ ಬರದೇ ಇರೋದ್ರಿಂದ ಪಾಕಿಸ್ತಾನಕ್ಕೆ ಭಾರೀ ನಷ್ಟ : ಭಾರತದ ಕ್ರಿಕೆಟ್ ಅಭಿಮಾನಿಗಳು ಪ್ರಪಂಚದಾದ್ಯಂತ ಇದ್ದಾರೆ. ಯಾವ ದೇಶದಲ್ಲಿ ಐಸಿಸಿ ಟೂರ್ನಮೆಂಟ್‌ಗಳು ನಡೆದರೂ ಭಾರತದ ಅಭಿಮಾನಿಗಳು ಸ್ಟೇಡಿಯಂಗೆ ಬಂದು ಮ್ಯಾಚ್‌ಗಳನ್ನು ನೋಡ್ತಾರೆ, ದುಡ್ಡು ಖರ್ಚು ಮಾಡ್ತಾರೆ. ಇದರಿಂದ ಒಳ್ಳೆ ಆದಾಯ ಬರುತ್ತೆ. ಇದರಿಂದ ಅಲ್ಲಿನ ಆರ್ಥಿಕ ವ್ಯವಸ್ಥೆಗೆ ಸಹಾಯ ಆಗುತ್ತೆ.

ಚಾಂಪಿಯನ್ ಟ್ರೋಫಿಯಲ್ಲಿ ಪಾಕಿಸ್ತಾನ ಕೂಡ ಇದೇ ಆಲೋಚನೆಯಿಂದ ಭಾರೀ ದುಡ್ಡು ಖರ್ಚು ಮಾಡಿತು. ಆದರೆ ಭಾರತ ಪಾಕ್ ಹೋಗೋಕೆ ಒಪ್ಪದೇ ಇರೋದ್ರಿಂದ ಆ ದೇಶದ ಆಸೆಗಳೆಲ್ಲಾ ಸುಟ್ಟು ಹೋದವು. ಇನ್ನು ಉಳಿದ ಆಸೆಗಳನ್ನು ಪಾಕಿಸ್ತಾನ ತಂಡ ಲೀಗ್ ಮ್ಯಾಚ್‌ನಲ್ಲೇ ಸೋತು ಕಳೆದುಕೊಂಡಿತು. ಪಾಕ್ ಕೂಡ ಟೂರ್ನಿಯಿಂದ ಹೊರಬಿದ್ದಿದ್ದರಿಂದ ಸ್ಟೇಡಿಯಂಗೆ ಪಾಕಿಸ್ತಾನ ಪ್ರೇಕ್ಷಕರು ಕೂಡ ಬರಲಿಲ್ಲ. ಹೀಗಾಗಿ ಅಂದುಕೊಂಡ ಮಟ್ಟಿಗೆ ಟಿಕೆಟ್‌ಗಳು ಮಾರಾಟ ಆಗಲಿಲ್ಲ. ಇದರಿಂದ ಪಾಕಿಸ್ತಾನಕ್ಕೆ ಆ ದೇಶದ ಕ್ರಿಕೆಟ್ ಬೋರ್ಡ್‌ಗೆ ಭಾರೀ ನಷ್ಟ ಉಂಟಾಯಿತು.



ಪಾಕಿಸ್ತಾನದಲ್ಲಿ ಭಯೋತ್ಪಾದನೆ ಇರೋದ್ರಿಂದ 1996ರ ನಂತರ ಐಸಿಸಿ ಟೂರ್ನಮೆಂಟ್ ನಡೆದಿಲ್ಲ. 2025ರಲ್ಲಿ ಚಾಂಪಿಯನ್ ಟ್ರೋಫಿ ನಡೆಸುವ ಅವಕಾಶ ಬಂದಿದ್ದರಿಂದ ಒಳ್ಳೆ ಆದಾಯ ಬರುತ್ತೆ ಅಂದುಕೊಂಡಿದ್ದರು. ಇದಕ್ಕಾಗಿ ಕರಾಚಿ, ಲಾಹೋರ್, ರಾವಲ್ಪಿಂಡಿ ಕ್ರಿಕೆಟ್ ಸ್ಟೇಡಿಯಂಗಳನ್ನು ಹೊಸದಾಗಿ ಮಾಡಿದ್ದಾರೆ.

ಭದ್ರತೆಯನ್ನು ಹೆಚ್ಚಿಸಿದ್ದಾರೆ. ಕೆಲವು ಪಾಕ್ ಮಾಧ್ಯಮಗಳ ಪ್ರಕಾರ, ಈ ಟೂರ್ನಮೆಂಟ್‌ಗಾಗಿ ಪಾಕಿಸ್ತಾನ 64 ಮಿಲಿಯನ್ ಡಾಲರ್ ಅಂದ್ರೆ ಸುಮಾರು 558 ಕೋಟಿ ರೂಪಾಯಿ ಖರ್ಚು ಮಾಡಿದೆ. ಇದರ ಜೊತೆಗೆ ಆತಿಥ್ಯ, ಸಾರಿಗೆಗಾಗಿ ಸುಮಾರು 9 ಮಿಲಿಯನ್ ಡಾಲರ್ ಖರ್ಚಾಗಿದೆ. ಆದರೆ, ಇದರಿಂದ ಯಾವುದೇ ಲಾಭ ಆಗಲಿಲ್ಲ. ನಷ್ಟವೇ ಉಂಟಾಯಿತು.

**ಚಾಂಪಿಯನ್ ಟ್ರೋಫಿ ನಡೆಸೋದ್ರಲ್ಲಿ ಪಾಕಿಸ್ತಾನಕ್ಕೆ ಎಷ್ಟು ನಷ್ಟ?**


ಚಾಂಪಿಯನ್ಸ್ ಟ್ರೋಫಿ 2025ರಲ್ಲಿ ಪಾಕಿಸ್ತಾನ ತಂಡ ತನ್ನ ದೇಶದಲ್ಲಿ ಎರಡೇ ಮ್ಯಾಚ್ ಆಡಿತು. ನ್ಯೂಜಿಲ್ಯಾಂಡ್ ಜೊತೆ ನಡೆದ ಮೊದಲ ಮ್ಯಾಚ್‌ನಲ್ಲಿ ಹೀನಾಯವಾಗಿ ಸೋತಿತು. ಎರಡನೇ ಮ್ಯಾಚ್‌ನಲ್ಲಿ ಭಾರತ ತಂಡ ಸೋಲಿಸಿತು. ಈ ಎರಡು ಸೋಲುಗಳ ನಂತರ ಪಾಕಿಸ್ತಾನ ತಂಡ ಸೆಮಿಫೈನಲ್‌ಗೆ ಕೂಡ ಹೋಗಲಿಲ್ಲ.

ಬಾಂಗ್ಲಾದೇಶದ ಜೊತೆ ನಡೆಯಬೇಕಿದ್ದ ಕೊನೆಯ ಮ್ಯಾಚ್ ಮಳೆ ಕಾರಣದಿಂದ ರದ್ದಾಯಿತು. ಈ ಮ್ಯಾಚ್‌ಗಳ ನಂತರ ಪಾಕಿಸ್ತಾನ ಸ್ಟೇಡಿಯಂಗಳು ಖಾಲಿ ಖಾಲಿಯಾಗಿ ಕಾಣಿಸಿದವು.

ಚಾಂಪಿಯನ್ ಟ್ರೋಫಿ 2025 ನಡೆಸೋದಕ್ಕೆ ಪಾಕಿಸ್ತಾನಕ್ಕೆ ಐಸಿಸಿಯಿಂದ 6 ಮಿಲಿಯನ್ ಡಾಲರ್ ಅಂದ್ರೆ ಸುಮಾರು 52 ಕೋಟಿ ರೂಪಾಯಿ ಬರುತ್ತದೆ. ಪ್ರೇಕ್ಷಕರು ಬರದೇ ಇರೋದ್ರಿಂದ ಟಿಕೆಟ್‌ಗಳು ಹೆಚ್ಚಾಗಿ ಮಾರಾಟ ಆಗಲಿಲ್ಲ. ಇದರಿಂದ ಆದಾಯ ಕಡಿಮೆ ಬಂತು. ವಿದೇಶಿ ಪ್ರೇಕ್ಷಕರು ಕೂಡ ಕ್ರಿಕೆಟ್ ಮ್ಯಾಚ್‌ಗಳನ್ನು ನೋಡೋಕೆ ಪಾಕಿಸ್ತಾನಕ್ಕೆ ಹೋಗಲಿಲ್ಲ.

ಇದರಿಂದ ಟೂರ್ನಮೆಂಟ್‌ನಲ್ಲಿ ಖರ್ಚು ಮಾಡಿದಷ್ಟು ಆದಾಯ ಬರಲಿಲ್ಲ. ಒಂದು ಅಂದಾಜಿನ ಪ್ರಕಾರ ಚಾಂಪಿಯನ್ ಟ್ರೋಫಿ ನಡೆಸೋದ್ರಲ್ಲಿ ಪಾಕಿಸ್ತಾನಕ್ಕೆ ಸುಮಾರು 195 ಕೋಟಿ ರೂಪಾಯಿ ನಷ್ಟ ಉಂಟಾಗಿದೆ.

## ರವಿಚಂದ್ರನ್ ಹೃದಯ ದೋಚುವ ಕಳ್ಳ



ರವಿಚಂದ್ರನ್ ಸಿನಿಮಾಗಳು ಸದಾ ಭಿನ್ನ ಎನಿಸಿಕೊಳ್ಳುತ್ತವೆ. ಅವರು ಸಿನಿಮಾ ನಿರ್ಮಾಣ, ನಿರ್ದೇಶನ ಎಲ್ಲವನ್ನೂ ಮಾಡಿದ್ದಾರೆ. ರವಿಚಂದ್ರನ್ ಸಿನಿಮಾಗಳಲ್ಲಿ ಹೀರೋಯಿನ್‌ಗಳಿಗೆ ವಿಶೇಷ ಸ್ಥಾನ ನೀಡಲಾಗುತ್ತದೆ. ಈ ಬಗ್ಗೆ ಅನೇಕರು ಹೇಳಿಕೊಂಡಿದ್ದರು. ಇತ್ತೀಚೆ ಜೀ ಕನ್ನಡದ ರಿಯಾಲಿಟಿ ಶೋಗೆ ಆಗಮಿಸಿದ್ದ ಸುಧಾರಾಣಿ, ಶ್ರುತಿ ಮೊದಲಾದವರು ಈ ಬಗ್ಗೆ ಹೇಳಿಕೊಂಡಿದ್ದರು. ರವಿಚಂದ್ರನ್ ಸಿನಿಮಾಗಳಲ್ಲಿ ನಟಿಸುವಾಗ ಯಾವ ರೀತಿಯ ಅನುಭವ ಆಗಿದೆ ಎಂಬುದನ್ನು ಅವರು ವಿವರಿಸಿದ್ದರು. ಆ ಬಗ್ಗೆ ಇಲ್ಲಿದೆ ಮಾಹಿತಿ. ಜೀ ಕನ್ನಡ ವೇದಿಕೆ ಏರಿದ್ದ ಸುಧಾರಾಣಿ ಅವರು ರವಿಚಂದ್ರನ್ ಅವರನ್ನು ಹಾಡಿ ಹೊಗಳಿದ್ದರು. 'ರವಿಚಂದ್ರನ್ ಸಿನಿಮಾದಲ್ಲಿ ಹೀರೋಯಿನ್‌ಗೆ ಜಾಸ್ತಿ ಬೆಲೆ ಕೊಡುತ್ತಾರೆ. ಪರ್ಫಾರ್ಮೆನ್ಸ್ ಇರಬಹುದು, ಕಾಸ್ಟ್ಯೂಮ್ ಇರಬಹುದು ಎಲ್ಲದರಲ್ಲೂ ಅವರಿಗೆ ಹೆಚ್ಚಿನ ಆದ್ಯತೆ ಇರುತ್ತದೆ' ಎಂದು ರವಿಚಂದ್ರನ್ ಸಿನಿಮಾನ ಬಾಯ್ತುಂಬ ಹೊಗಳಿದರು.

'ನಾನು ಮೊದಲ ಬಾರಿ ರವಿಚಂದ್ರನ್ ಜೊತೆ ಡ್ಯುಯೆಟ್ ಸಾಂಗ್ ಹಾಡುವಾಗ ನನಗೆ ಸಾಮಾನ್ಯ ಸೀರೆ ಉಡಿಸಲಾಗಿತ್ತು. ಮೊದಲ ಶಾಟ್‌ನಲ್ಲಿ ನಿಂತಿದ್ದೆ. 150 ಸಿನಿಮಾಗಳಲ್ಲಿ ಕಾಟನ್ ಸೀರೆ ಉಟ್ಟುಕೊಂಡು ಬಂದಿದ್ದಾರೆ. ಇಲ್ಲಿಯೂ ಹಾಗೆ ಕರೆದುಕೊಂಡು ಬರ್ತೀರಲ್ರಿ ಎಂದು ರವಿಚಂದ್ರನ್ ಸಿಟ್ಟಾದರು. ಏನು ಮಾಡ್ತಿರೋ ಗೊತ್ತಿಲ್ಲ ರಾಣಿ ತರ ಕರೆದುಕೊಂಡು ಬರಬೇಕು ಎಂದರು. ಬೆಳಿಗ್ಗೆ ಶೂಟಿಂಗ್ ಇತ್ತು. ಆದರೆ, ಬಟ್ಟೆಯ ಕಾರಣಕ್ಕೆ ಮಧ್ಯಾಹ್ನ ಶೂಟಿಂಗ್ ಆಯ್ತು. ಅದು ನನಗೆ ಮೊದಲ ಅನುಭವ. ರಾಣಿ ತರ ತೋರಿಸಿದ್ರು. ಆ ತರ ಮನಸ್ಸು ಕದಿಯೋಕೆ ಅವರಿಗೆ ಮಾತ್ರ ಸಾಧ್ಯ' ಎಂದರು ಶ್ರುತಿ.

'ಕನ್ನಡಿಗರ ಮನಸ್ಸು ಕದ್ದ ಕಳ್ಳ ಅವರು. ಅದರಲ್ಲೂ ಸಂಗೀತದಲ್ಲಿ ದೊಡ್ಡ ಅಲೆ ಸೃಷ್ಟಿ ಮಾಡಿದ ಮಾಂತ್ರಿಕ. ಕನ್ನಡ ಚಿತ್ರರಂಗ ಶ್ರೀಮಂತ ಗೊಳಿಸಿದ ಧೀಮಂತ. ಕಳ್ಳ ಕೃಷ್ಣ' ಎಂದರು ತಾರಾ.

## ಬಿಕಿನಿ ಧರಿಸಲು ಹಿಂದೇಟು ಹಾಕಿ ಮಿಸ್ ವರ್ಲ್ಡ್ ಗೆದ್ದ ಏಕೈಕ ಬಾಲಿವುಡ್ ನಟಿ






ಸೌಂದರ್ಯ ಸ್ಪರ್ಧೆ ಎಂದರೆ ಅಲ್ಲಿ ದೇಹದ ಸೌಂದರ್ಯ ಮಾತ್ರವಲ್ಲದೇ ಸ್ಪರ್ಧಾಳುಗಳ ಆಂತರಿಕ ಸೌಂದರ್ಯ, ಬುದ್ಧಿವಂತಿಕೆ, ಜಾಣ್ಮೆ ಎಲ್ಲವುಗಳನ್ನೂ ನೋಡಲಾಗುತ್ತದೆ ಎಂದು ಹೇಳಿದರೂ, ಸುಂದರಿಯರ ಬಾಹ್ಯ ಸೌಂದರ್ಯ ನೋಡಲು ಬಿಕಿನಿ ಧರಿಸುವುದು ಕಡ್ಡಾಯವಾಗಿದೆ! ಸ್ಪರ್ಧಿಗಳ ಮೈಮಾಟ ಹೇಗಿದೆ, ಯಾವ ಭಾಗ ಹೇಗಿದೆ, ಎಷ್ಟು ಅಳತೆ ಇದೆ ಇವೆಲ್ಲವನ್ನೂ ಪರಿಗಣನೆಗೆ ತೆಗೆದುಕೊಳ್ಳಲು ಟು ಪೀಸ್ ಧರಿಸುವುದು ಕಡ್ಡಾಯವಾಗಿದೆ. ಆದರೆ ಬಿಕಿನಿ ಧರಿಸಲ್ಲ ಎನ್ನುವ ಮೂಲಕ ಎಲ್ಲರ ಶ್ಲಾಘನೆಗೆ ಪಾತ್ರವಾಗಿ ಕೊನೆಗೆ ಮಿಸ್ ವರ್ಲ್ಡ್ ಕಿರೀಟವನ್ನು ತಮ್ಮದಾಗಿಸಿಕೊಂಡಿದ್ದ ಏಕೈಕ ನಟಿಯೆಂದರೆ ಅದು ಪ್ರಿಯಾಂಕಾ ಚೋಪ್ರಾ! ಆ ಬಗ್ಗೆ ಪ್ರಿಯಾಂಕಾ ಚೋಪ್ರಾ ಅವರ ತಾಯಿ ಮಧು ಚೋಪ್ರಾ ಲೆಹ್ರೆನ್ ರೆಟ್ರೋಗೆ ಈಗ ನೀಡಿರುವ ಸಂದರ್ಶನದಲ್ಲಿ ಅದನ್ನು ಬಹಿರಂಗಪಡಿಸಿದ್ದಾರೆ.

'2001ರಲ್ಲಿ ಮಿಸ್ ವರ್ಲ್ಡ್ ಪಟ್ಟಕ್ಕಾಗಿ ಸ್ಪರ್ಧಿಸುತ್ತಿದ್ದಾಗ, ಸ್ಪರ್ಧೆಯಲ್ಲಿ ತಾನು ಏನು ಮಾಡುತ್ತೇನೆ ಮತ್ತು ಏನು ಮಾಡುವುದಿಲ್ಲ ಎಂಬುದರ ಬಗ್ಗೆ ಆಕೆಗೆ ಸ್ಪಷ್ಟತೆ ಇತ್ತು. ಹೀಗಾಗಿ, ಆಕೆ ಈಜುಡುಗೆ ವಿಭಾಗದಲ್ಲಿ ಬಿಕಿನಿ ಧರಿಸಲು ನಿರಾಕರಿಸಿದಳು ಮತ್ತು ಇದರ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ ತನ್ನ ಘಟನೆಯನ್ನು ಉಳಿಸಿಕೊಂಡಳು. ರ್‍ಯಾಂಪ್‌ನಲ್ಲಿ ನಡೆಯುವುದು ಮತ್ತು ಮೇಕಪ್ ಮಾಡುವುದು ಹೇಗೆ ಎಂದು ಕಲಿಸಿದ ಲಾರಾ ದತ್ತಾ ಅವರೊಂದಿಗೆ ಇದೇ ಸಂದರ್ಭದಲ್ಲಿಯೇ ಪ್ರಿಯಾಂಕಾ ಆಪ್ತಳಾದಳು' ಎಂದು ಮಧು ಚೋಪ್ರಾ ಹೇಳಿದ್ದಾರೆ.

ಸ್ಪರ್ಧೆಯ ಸಮಯದಲ್ಲಿ ಲಾರಾ ದತ್ತ ಪ್ರಿಯಾಂಕಾಗೆ ಹೇಗೆ ಸಹಾಯ ಮಾಡಿದರು ಎಂಬುದನ್ನು ಮಧು ಚೋಪ್ರಾ ನೆನಪಿಸಿಕೊಂಡರು. "ಲಾರಾ ಪ್ರಿಯಾಂಕಾಗೆ ಹಲವು ರೀತಿಯಲ್ಲಿ ನೆರವಾದರು. ಕ್ಯಾಟ್ ವಾಕ್ ಮಾಡುವುದು, ವೇದಿಕೆಯ ಮೇಲೆ ನಡೆಯುವುದು ಹೇಗೆ ಎನ್ನುವುದನ್ನು ಕಲಿಸಿದರು, ಸ್ವಂತವಾಗಿ ಮೇಕಪ್ ಮಾಡುವುದು ಹೇಗೆಂದು ಕಲಿಸಿದರು. ಏಕೆಂದರೆ ಅವರು ಎಲ್ಲವನ್ನೂ ತಾವೇ ಮಾಡಬೇಕಾಗಿತ್ತು. ಆದರೆ ಪ್ರಿಯಾಂಕಾ ಕಾಜಲ್ ಹಾಕಿಕೊಂಡಿರುವುದನ್ನು ಹೊರತುಪಡಿಸಿ ಯಾವ ಮೇಕಪ್ ಕೂಡ ಮಾಡಿಕೊಂಡಿರಲಿಲ್ಲ ಎಂದಿದ್ದಾರೆ ಮಧು.

ಆದರೆ ಇದೀಗ ಆಗಿದ್ದೇ ಬೇರೆ ಬಿಡಿ. ಪ್ರಿಯಾಂಕಾ ಚೋಪ್ರಾ ಬಿಕಿನಿ ಧರಿಸುವುದು ಮಾಮೂಲಾಗಿಬಿಟ್ಟಿದೆ. ಅದರಲ್ಲಿಯೂ ಮದುವೆಯಾದ ಮೇಲೆ ಇನ್ನಷ್ಟು ಹಾಟ್ ಆಗಿ ಕಾಣಿಸಿಕೊಳ್ಳುವ ಹಂಬಲದಿಂದ ಬಿಕಿನಿ ಧರಿಸಿ ಅದರ ವಿಡಿಯೋ ಶೇರ್‌ಮಾಡುತ್ತಾರೆ. ಅವರ ಈ ಅವತಾರಗಳು ಸೋಷಿಯಲ್ ಮೀಡಿಯಾಗಳಲ್ಲಿ ಸಾಕಷ್ಟು ವೈರಲ್ ಆಗುತ್ತಲೇ ಇರುತ್ತವೆ. ಆದರೆ, ಅಂದು ಮಾತ್ರ ಪ್ರಿಯಾಂಕಾ ಎಲ್ಲರ ಮನ ಗೆದ್ದಿದ್ದು ಸುಳ್ಳಲ್ಲ.

## ಕನ್ನಡದಲ್ಲಿ ಬೆಳೆದು ಬರದೇ ಇರುವವರ ಬಗ್ಗೆ ಮಾತನಾಡಲ್ಲ



ಕಲಾವಿದರು ಕನ್ನಡ ಬೆಳೆಸಿ ಉಳಿಸುವ ಕೆಲಸ ಮಾಡುತ್ತಿಲ್ಲ ಎಂದು ರಾಜಕಾರಣಿಗಳಿಂದ ಕೇಳಿ ಬರುತ್ತಿದೆ. ಹಲವರು ಇಲ್ಲಿ ಪರೋಕ್ಷವಾಗಿ ರಶ್ಮಿಕಾ ಮಂದಣ್ಣ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ. ಕನ್ನಡದಲ್ಲಿ ಬೆಳೆದು ಕನ್ನಡಕ್ಕೆ ಸೇವೆ ಸಲ್ಲಿಸದೆ ಪರ ಭಾಷೆಯಲ್ಲಿ ಮಿಂಚುತ್ತಿದ್ದಾರೆ ಹಾಗೂ ಇಲ್ಲಿರುವ ಕಲಾವಿದರು ಎಲ್ಲಿ ಹೋದ್ರಿ? ಯಾಕೆ ನೀವು ಬರುತ್ತಿಲ್ಲ ಎಂದು ಪ್ರಶ್ನೆ ಎದುರಾಗುತ್ತಿದೆ. ಕೆಲವು ದಿನಗಳ ಹಿಂದೆ ಖಾಸಗಿ ಅಂಗಡಿ ಓಪನಿಂಗ್ ಕಾರ್ಯಕ್ರಮದಲ್ಲಿ ನಿಶ್ವಿಕಾ ನಾಯ್ಡು ಭಾಗಿಯಾಗಿದ್ದರು, ಈ ವೇಳೆ ಈ ಹೇಳಿಕೆಗಳ ಬಗ್ಗೆ ರಿಯಾಕ್ಟ್ ಮಾಡಿದ್ದಾರೆ.

'ಭಾಷೆ ಸಿನಿಮಾ ಅಂತ ಬಂದಾಗ ನಾವು ಒಟ್ಟುಗೂಡಿ ಕೆಲಸ ಮಾಡುತ್ತೀವಿ. ಅದೇ ನಮ್ಮ ಜೀವನ. ಇದಕ್ಕೆ ನಾವು ಸಪೋರ್ಟ್ ಮಾಡುವುದಿಲ್ಲ ಅನ್ನೋದು ಹಾರ್ಶ್ ಸ್ಟೇಟ್ಮೆಂಟ್ ಆಗಿರುತ್ತದೆ. ನಮ್ಮ ಕೈಯಲ್ಲಿ ಎಷ್ಟು ಸಾಧ್ಯವೋ ಅಷ್ಟು ಸಪೋರ್ಟ್ ಮಾಡುತ್ತಿದ್ದೀವಿ. ಏನೋ ಒಂದು ಕೆಲಸದಿಂದ ಆ ಸಂದರ್ಭದಲ್ಲಿ ನಾವು ಇರಲು ಆಗದೇ ಇದ್ದಂತೆ ಸಮಯದಲ್ಲಿ ಅವರು ನಮ್ಮನ್ನು ಕ್ಷಮಿಸಬೇಕು. ಯಾವುದೇ ಉದ್ದೇಶದಿಂದ ಮಾಡಿರುವ ಸಂದರ್ಭ ಅಲ್ಲ. ಆರ್ಟಿಸ್ಟ್‌ಗಳಾಗಿ ನಾವು ಕಾಣಿಸಿಕೊಂಡಾಗ ನಮಗೆ ಖುಷಿ ಜಾಸ್ತಿ, ಜನರೊಟ್ಟಿಗೆ ಇದ್ದಷ್ಟು ಖುಷಿ ಜಾಸ್ತಿ ಹೀಗಿರುವಾಗ ನಾವು ಯಾಕೆ ಮನೆಯಲ್ಲಿ ಕೂರುತ್ತೀವಿ ಹೇಳಿ?' ಎಂದು ನಿಶ್ವಿಕಾ ನಾಯ್ಡು ಮಾತನಾಡಿದ್ದಾರೆ.

'ಕನ್ನಡದಲ್ಲಿ ಬೆಳೆದು ಕನ್ನಡದಲ್ಲಿ ಕಾರ್ಯಕ್ರಮ ಮಾಡಿದರೆ ಬರುವುದಿಲ್ಲ ಅನ್ನೋ ವ್ಯಕ್ತಿಗಳ ಬಗ್ಗೆ ನಾನು ಮಾತನಾಡುವುದಿಲ್ಲ. ಹೇಳಿಕೆ ನೀಡಿರುವವರ ಬಗ್ಗೆನೂ ನಾನು ಏನೂ ಹೇಳುವುದಿಲ್ಲ. ಅವರು ನೀಡಿರುವ ಸ್ಟೇಟ್ಮೆಂಟ್ ಬಗ್ಗೆ ನಾನು ಕೇಳಿಸಿಕೊಂಡಿಲ್ಲ ಹಾಗೂ ಮತ್ತೊಬ್ಬರ ಬಗ್ಗೆ ಈ ರೀತಿ ಮಾತನಾಡಬೇಕು ಅಂತ ಹೇಳುವ ಅರ್ಹತೆ ನನಗೆ ಇಲ್ಲ. ಕನ್ನಡಕ್ಕೆ ಇಲ್ಲಿ ಯಾರೂ ಅವಮಾನ ಮಾಡುತ್ತಿಲ್ಲ ಇದು ಅವರ ವಿವೇಚನೆಗೆ ಬಿಟ್ಟಿದ್ದು' ಎಂದು ನಿಶ್ವಿಕಾ ನಾಯ್ಡು ಹೇಳಿದ್ದಾರೆ. ನಿಶ್ವಿಕಾ ಮಾತೃಭಾಷೆ ಕನ್ನಡ ಅಲ್ಲದಿದ್ದರೂ ಕೂಡ ಕನ್ನಡ ಕಲಿತು ಸ್ಪಷ್ಟವಾಗಿ ಮಾತನಾಡುತ್ತಿರುವುದುಕ್ಕೆ ನೆಟ್ಟಿಗರು ಮೆಚ್ಚುಗೆ ವ್ಯಕ್ತ ಪಡಿಸುತ್ತಿದ್ದಾರೆ. ಅಲ್ಲದೆ ತಡವಾದರೂ ಪರ್ವಾಗಿಲ್ಲ ಎಂದು ನಿಶ್ವಿಕಾ ಕನದ್ನಡ ಕಥೆಗಳನ್ನೇ ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ.

'ಒಂದು ಸಮಯದಲ್ಲಿ ನನ್ನ ಫ್ರೆಂಡ್ ಜೊತೆ ಪಾರ್ಟಿ ಮಾಡುತ್ತಿರುವ ವಿಡಿಯೋವನ್ನು ಅಪ್ಲೋಡ್ ಮಾಡಿದೆ. ಅಲ್ಲಿವರೆಗೂ ನಾನು ಯಾವ ವಿಡಿಯೋ ಅಪ್ಲೋಡ್ ಮಾಡಿರಲಿಲ್ಲ ಆದರೆ ಅದು ಸಿಕ್ಕಾಪಟ್ಟೆ ವೈರಲ್ ಆಗಿತ್ತು. ಆ ಸಮಯದಲ್ಲಿ ಟ್ರೋಲ್ ಹೇಗೆ ಹ್ಯಾಂಡಲ್ ಮಾಡಬೇಕು ಎಂದು ಗೊತ್ತಾಗಲಿಲ್ಲ ....ಅಯ್ಯೋ ನಾನು ಮನೆಯಿಂದ ಹೊರಗಡೆ ಹೋಗುವುದಿಲ್ಲ ಜನರಿಗೆ ಕಾಣಿಸಿಕೊಳ್ಳುವುದಿಲ್ಲ ಅನ್ನೋ ಮೈಂಡ್‌ಸೆಟ್‌ಗೆ ಬಂದು ಬಿಟ್ಟೆ. ಆ ಸಮಯದಲ್ಲಿ ಸಪೋರ್ಟ್ ಆಗಿ ನಿಂತಿದ್ದು ನನ್ನ ತಾಯಿ. ನಿನ್ನ ತಾಯಿಯಾಗಿ ನನಗೆ ಸಮಸ್ಯೆ ಇಲ್ಲ ನನ್ನ ಅಕ್ಕ ತಂಗಿ ಅಂತ ಯಾರಿಗೂ ತಲೆ ಕೆಡಿಸಿಕೊಳ್ಳುತ್ತಿಲ್ಲ ನೀನು ಯಾಕೆ ಈ ರೀತಿ ಇದ್ಯಾ ಎನ್ನುತ್ತಿದ್ದರು. ನೀನು ಮನೆಯಲ್ಲಿ ಕುಳಿತುಕೊಂಡಿದ್ದರೂ ಜನರು ತಪ್ಪು ಎನ್ನುತ್ತಾರೆ ನೀನು ಎಂಜಾಯ್ ಮಾಡಿದ್ದರೂ ತಪ್ಪು ಎನ್ನುತ್ತಾರೆ. ದೇವರಿಗೂ ತಪ್ಪು ನೀನು ಎನ್ನುವ ಜನರು ಇರುವಾಗ ನಾನು ಸರಿ ನಾನು ಈ ರೀತಿ ಇರುವುದು ನನ್ನನ್ನು ನಂಬಿ ಎಂದು ಯಾಕೆ ಹೇಳಬೇಕು?' ಎಂದು ಮಾತನಾಡಿದ್ದಾರೆ.

Edited, Published and Owned by Laxmiprasanna R.H, #1652/6, 20th Cross, 8th Main, C Block, SahakarNagar, Bangalore-560092. Printed by P N Printers, Narasipalya, Arishinakunte(Post), Kasaba(hobali), Nelamangala, Bengaluru-562123
Email-mussanje2010@gmail.com, Phone: 9448074878